ನಾಗಮಯ್ಯನ ಸಾವಿಗಾಗಿ ಕೆಲವು ದಿನ ಪುಂಗನೂರಿಗೆ ಊರೇ ಗೋಳಾಡಿತು. ಒಂದೆರಡು ದಿನದಲ್ಲಿ ಜನ ಇದನ್ನು ಮರೆತು ಹೋಯಿತು. ಮಲ್ಲಪ ಹಾಗೂ ಪುನ್ನಮಯ್ಯ ಒಂದೆರಡು ತಿಂಗಳು ದಿಕ್ಕು ತೋಚದವರಂತೆ ಚಿಂತಾಕ್ರಾಂತರಾಗಿದ್ದರು. ಕ್ರಮೇಣ ರಾಜಕೀಯದ ಸೆಳತಕ್ಕೆ ಸಿಕ್ಕಿ ಅವರೂ ತಂದೆಯ ಸಾವನ್ನು ಮರೆಯುವಂತಾಯಿತು. ಅಬ್ಬಕಬ್ಬೆಯ ಹಿತಾಹಿತಗಳನ್ನು ಆಗಾಗ ವಿಚಾರಿಸಿ ನಾಗಮಯ್ಯ ಆಕೆಯ ಮೇಲೆ ಪರಿಣಾಮ ಬೀರಿದ್ದನು. ಆಕೆ ಸುಲಭವಾಗಿ ತನ್ನ ಮಾವನನ್ನು ಮರೆಯಲಾಗಲಿಲ್ಲ. ಇನ್ನು ಮೊಮ್ಮಕ್ಕಳಲ್ಲಿ ಅತ್ತಿಮಬ್ಬೆ ಗುಂಡುಮಬ್ಬೆಯರೇ ಅಜ್ಜನಿಗೆ ಅತಿಯಾಗಿ ಅಂಟಿಕೊಡಿದ್ದವರು. ನಾಗಮಯ್ಯನ ಕೋಣೆಗೆ ಹೋದಾಗಲೆಲ್ಲ ಇವರಿಬ್ಬರಿಗೂ ಸಂಕಟ ಉಕ್ಕಿ ಬರುತ್ತಿತ್ತು. ತಾತನನ್ನು ಬಿಟ್ಟು ಇವರು ಉಂಡವರಲ್ಲ. ಅನ್ನ ಇಳಿಯುವುದೂ ಕಷ್ಟವಾಗುತ್ತಿತ್ತು. ಇವರ ಮೈ ಬಾಡಿತು. ಮೆರಗು ಮಸುಕಾಯಿತು. ಉತ್ಸಾಹ ಹಿಂಗಿಹೋಯಿತು. ಇವರ ಮೈ ಬಾಡಿತು. ಮೆರಗು ಮಸುಕಾಯಿತು. ಉತ್ಸಾಹ ಹಿಂಗಿಹೋಯಿತು. ಉಲ್ಲಾಸ ಅಜ್ಜನ ಹಿಂದೆಯೇ ಹೋದಂತಾಗಿತ್ತು. ಒಮ್ಮೊಮ್ಮೆ ಅಬ್ಬಕಬ್ಬೆ ಈ ಮಕ್ಕಳನ್ನು ಕಂಡು ಬೆಚ್ಚುತ್ತಿದ್ದಳು. ಹೀಗೇ ಬಿಟ್ಟರೆ ಹುಚ್ಚು ಹಿಡಿದೀತೆಂದು ಗಾಬರಿಗೊಂಡಳು. ಏನಾದರೂ ಮಾಡಿ ಅಜ್ಜನನ್ನು ಮರೆಸಬೇಕೆಂದು ವಿಶ್ವಪ್ರಯತ್ನವೆಸಗಿದಳು. ಅಪೂರ್ವ ರತ್ನಾಭರಣಗಳನ್ನು ಮಾಡಿಸಿ. ಇಟ್ಟುಕೊಳ್ಳಿರೆಂದು ಮಕ್ಕಳನ್ನು ಪೀಡಿಸಿದಳು. ರತ್ನವೃಷ್ಟಿ ಮಾಡಿಸುತ್ತಿದ್ದ ಅಜ್ಜನ ನೆನಪಾಗಿ ಇವರಿಬ್ಬರ ಕಣ್ಣಲ್ಲೂ ಹನಿ ಮೂಡುತ್ತಿದ್ದವು. ಅಜ್ಜನಿಗಾಗಿ ಇವರು ಮುತ್ತಿನ ಮಣಿಗಳನ್ನು ಅರ್ಪಿಸುತ್ತಿರುವಂತೆ ಭಾಸವಾಗುತ್ತಿತ್ತು. ಪಟ್ಟೆ ಪೀತಾಂಬರಗಳನ್ನು ತರಿಸಿ ಮಕ್ಕಳ ಮುಂದಿಟ್ಟು ಇವು ನಿಮಗೊಪ್ಪುವುವು, ಉಟ್ಟುಕೊಳ್ಳಿ ಎಂದು ಅಬ್ಬಕಬ್ಬೆ ಅಂಗಲಾಚುವಳು. ಕಣ್‌ತುಂಬ ನಮ್ಮ ಶೃಂಗಾರವನ್ನು ನೋಡುವ ಅಜ್ಜನಿಲ್ಲದಾಗ ಇವು ತಾನೇ ಏತಕ್ಕೆ ಎಂದು ಅತ್ತಿಮಬ್ಬೆ ಗುಂಡುಮಬ್ಬೆಯರು ಪಟ್ಟೆ ಪೀತಾಂಬರವನ್ನು ಒತ್ತಟ್ಟಿಗೆ ನೂಕಿ ಬಿಡುವರು. ತಾಯ ಬಲವಂತಕ್ಕೆ ಯಾಂತ್ರಿಕವಾಗಿ ಮೊಗ್ಗಿನ ಜಡೆಹಾಕಿಕೊಂಡರೂ ಮರುಕ್ಷಣದಲ್ಲೇ ಅಜ್ಜನಿಗೆ ನೋಡಿಸೋಣವೆಂದು ಆತನ ಕೋಣೆಗೆ ಇವರಿಬ್ಬರೂ ಬಂದು ಸಪ್ಪೆಮೋರೆ ಹಾಕಿಕೊಂಡು ಹಿಂದಿರುಗುವರು. ದಿನದಿನಕ್ಕೂ ಆಹಾರವನ್ನು

ತಗ್ಗಿಸಿದರು.  ಅಬ್ಬಕಬ್ಬೆಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಅಜ್ಜನಟ್ಟೆ ಇವರೂ ಆಹಾರವನ್ನು ಬಿಡುತ್ತಿರುವರೊ ಏನೋ ಎಂದು ಹೆದರಿದಳು. ಅಜ್ಜ ಸತ್ತಮೇಲೆ ಇವರಿಬ್ಬರೂ ವೀಣೆಯನ್ನು ಹಿಡಿಯಲಿಲ್ಲ. ಸುಶ್ರಾವ್ಯವಾಗಿ ಹಾಡುತ್ತ ನಲಿದ ಈ ಹೆಮ್ಮಕ್ಕಳು ಹಾಡುವುದನ್ನೂ ಬಿಟ್ಟರು. ಆಗಾಗ ಹಿಂದೆಲ್ಲ ನವಿಲ ನಾಟ್ಯವಾಡಿ ಸಮ್ಮೋಹನವೆರಚುತ್ತಿದ್ದರು. ಈಗಂತು ಗೆಜ್ಜೆಯನ್ನು ಕಂಡರೇ ಗರ ಹೊಡೆದವರಂತೆ ನಿಂತು ಬಿಡುತ್ತಿದ್ದರು. ಅಜ್ಜನ ಕೋಣೆಯಲ್ಲಿ ವೇದಿಕೆಯ ಮೇಲೆ ಅಜ್ಜಕೂರುವ ತಾಣದಲ್ಲಿ ಇವರ ಸಂಗೀತ ಪರಿಕರಗಳೂ ನಾಟ್ಯೋಪಕರಣಗಳೂ ಮಂಕಾಗಿ ಧೂಳು ತುಂಬಿಕೊಂಡು ಬಿದ್ದಿದ್ದವು.

"ಅತ್ತಿಮಬ್ಬೆ ಗುಂಡುಮಬ್ಬೆಯರಿಬ್ಬರೂ ಅಜ್ಜನ ನೆನಪಿನಲ್ಲೇ ನವೆಯುತ್ತಿರುವ ರಲ್ಲ. ಹೀಗೆ ಬಿಟ್ಟರೆ ಅವರ ಗತಿ !" ಎಂದು ಅಬ್ಬಕಬ್ಬೆ ತನ್ನ ಗಂಡನಲ್ಲಿ ಸಂಕಟವನ್ನು ತೋಡಿಕೊಂಡಳು.

"ಏನು ಮಾಡುವುದೋ ಏನೊ ದಿಕ್ಕೇ ತೋಚುತ್ತಿಲ್ಲ." ಮಲ್ಲಪ ನಿರುಪಾಯನಾಗಿ ನುಡಿದನು.

"ಹೀಗೆಂದು ಸುಮ್ಮನಿರಲಾದೀತೆ?"

" ಹೋಗಲಿ ಏನು ಮಾಡಬೇಕೆಂಬುದನ್ನಾದರೂ ಹೇಳಬಾರೆದೆ?"

"ನೀವು ಸದಾ ಹೊರಗಿರುವಿರಿ. ನಿಮಗೆ ನನ್ನ ಸಂಕಟ ಅರ್ಥವಾಗುವುದಿಲ್ಲ. ಎರಡು ಹೊತ್ತು ಮನೆಯಲ್ಲೇ ಕೊಳೆಯುವ ನಾನಂತು ಅವರನ್ನು ನೋಡಲಾರೆ."

"ಏನು ಅಷ್ಟೊಂದು ಹದಗೆಟ್ಟಿದೆಯೆ?"

"ಇನ್ನೂ ಕೇಳುತ್ತಿರುವಿರಲ್ಲ ! ಅವರಿಬ್ಬರೂ ಸರಿಯಾಗಿ ಊಟಮಾಡುತ್ತಿಲ್ಲ. ಸರಿಯಾಗಿ ಬಟ್ಟೆ ತೊಡುತ್ತಿಲ್ಲ. ಆಭರಣವನ್ನು ಕಂಡರೆ ಅತ್ತುಬಿಡುವರು ! ತಲೆ ನೆಟ್ಟ ಗಿಲ್ಲದವರಂತೆ ಮಂಕಾಗಿ ಕುಳಿತು ಬಿಡುವರು ! ಮೊದಲೆಲ್ಲ ತಂಗಾಳಿಗೆ ಕುಣಿವವಸಂತದ ಲತೆಯಂತೆ ಉಲ್ಲಾಸದಿಂದಿದ್ದವರು ಒಮ್ಮೆಗೇ ಹೀಗಾದರೆ ನನ್ನ ಗತಿ ಏನಾಗಿರಬೇಡ ! ಮದುವೆಗೆ ಬಂದ ಮಕ್ಕಳು ಹೀಗಾದರೆ ಮುಂದೆ?"

"ಹೋಗಲಿ ಮದುವೆ ಏರ್ಪಾಟನ್ನಾದರೂ ಮಾಡೋಣವೆ?"

"ಏನಾದರೂ ಮಾಡಿ ಮಹಾರಾಯರೆ. ಮೊದಲಂತೆ ಅವರಾದರೆ ಸಾಕು."

“ಗಂಡುಗಳನ್ನು ಹುಡುಕಬೇಕಲ್ಲ?”

“ ಹುಡುಕದೆ ನಮ್ಮ ಅನುಕೂಲಕ್ಕೆ ಅವರಾಗಿಯೇ ಬರುವರೇನು?”

“ಅಜ್ಜನ ನೆನಪನ್ನು ನಾವೇನಾದರೂ ಮಾಡಿ ಮರೆಸಬೇಕು. ಇಲ್ಲದಿದ್ದರೆ ಹುಚ್ಚು ಹಿಡಿದೀತು” ಎಂದು ಅಬ್ಬಕಬ್ಬೆ ಗಂಡನನ್ನು ಎಚ್ಚರಿಸಿದಳು.

“ಇನ್ನೊಂದು ಕಾರ್ಯ ಅವಸರವಾಗಿ ಆಗಬೇಕಾಗಿದೆ.”

“ಹೆಣ್ಣುಮಕ್ಕಳ ಮದುವೆಗಿಂತ ಅವಸರವಾದುದು ಯಾವುದೋ !”

“ಜಿನಚಂದ್ರರು ಶಾಂತಿಪುರಾಣವನ್ನು ಕನ್ನಡದಲ್ಲಿ ಕೇಳಬೇಕೆಂದು ಆಶಿಸಿದರು. ಅವರು ಬದುಕಿರುವಾಗ ಮಾಡಿಸಲು ನಮ್ಮಿಂದಾಗಲಿಲ್ಲ. ಆ ಮಹಾತ್ಮನ ಕನಸು ಕಾನಸಾಗೇ ನಿಲ್ಲಬಾರದು.”

“ಅದಕ್ಕೂ ಮಕ್ಕಳ ಮದುವೆಗೂ ಗಂಟುಹಾಕಬೇಡಿ. ಯಾರಾದರೂ ಕವಿಯನ್ನು ಕರೆದು ಬರೆಸಿ ಬಿಡಿ. ನಾನು ಬೇಡವೆಂದೇನೆ? ಅದರ ಪಾಡಿಗೆ ಅದು, ಇದರ ಪಾಡಿಗೆ ಇದು.”

“ಪ್ರಿಯೆ, ಪುಸ್ತಕ ಬರೆಸುವುದು ಅಷ್ಟು ಸುಲಭವೇ? ಬೆಳುದಿಂಗಳನ್ನಾಗಲಿ ಮಂದಾನಿಲವನ್ನಾಗಲಿ, ವಸಂತವನ್ನಾಗಲಿ ಬೇಕುಬೇಕೆಂದಾಗಲೆಲ್ಲ ತರಲಾದೀತೆ ? ಮನಸ್ಸು ಮಾಡಿದರೆ ಒಂದೆರಡು ವಾರದಲ್ಲೇ ನೂರಾರು ಮದುವೆ ಮಾಡೇನು. ಆದರೆ ನಾವು ಕೇಳಿದಾಗ ಹೂಗುಟ್ಟುವ ಕವಿ ಬೇಕಲ್ಲ !” ಎಂದು ಮಲ್ಲಪ ಇರುವ ತೊಡಕನ್ನು ವಿವರಿಸಿದನು.

“ಮನೆಯಲ್ಲೇ ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕೆ ಅಳುತ್ತಿರುವಿರಲ್ಲ !”

“ಮನೆಯಲ್ಲಿ ಬೆಣ್ಣೆಯೆ? ಹಾಗಂದರೇನು?”

“ತಾವು ಕರೆದು ಒಂದು ಮಾತು ಹೇಳಿದರೆ ಪಂಪಣ್ಣ ಇಲ್ಲವೆಂದಾರೆ? ಪೊನ್ನ ಸ್ವಾಮಿಯನ್ನು ಕೇಳಿಕೊಂಡರೂ ತಮ್ಮ ಕಾರ್ಯ ಆಗದಿರದೆ?” ಎಂದು ಅಬ್ಬಕಬ್ಬೆ ಮಾರ್ಗದರ್ಶನ ಮಾಡಿದಳು.

“ಮೊದಲು ಅವರಿಬ್ಬರನ್ನೂ ಕರೆಸಿಕೊಳ್ಳೋಣ. ಮಹರ್ಷಿಯ ಅತುಳಾಸೆಯನ್ನು ಅವರಲ್ಲಿ ನಿವೇದಿಸಿಕೊಳ್ಳುವೇನು. ಶಾಂತಿಪುರಾಣ ರಚನೆಗೆ ಏರ್ಪಾಟು ಮೊಟ್ಟ ಮೊದಲು. ಅನಂತರ ಮಕ್ಕಳ ಮದುವೆ!” ಮಲ್ಲಪ ತನ್ನ ದೃಢ ನಿರ್ಧಾರವನ್ನು ತಿಳಿಸಿದನು.

“ಇಬ್ಬರದನ್ನೂ ಒಟ್ಟಿಗೆ ಮಾಡಬೇಕು.”

“ಗಂಡುಗಳು ಸಿಕ್ಕಿದರೆ.”

“ಒಮ್ಮೆಗೆ ನೂರು ಮದುವೆ ಮಾಡಬಲ್ಲ ತಮಗೆ ಎರಡು ಮದುವೆ ಒಂದು ಕಷ್ಟವೇ?”

“ಹೆಂಗಸರ ಮುಂದೆ ಏನಾದರೂ ಮಾತಾಡುವುದೇ ತಪ್ಪು.”

“ಛೆ ! ನಾನೇನು ಮಾಡಿದೆ ಈಗ ?”

“ಅಲ್ಲ, ನಿನಗೆ ಧೈರ್ಯ ಬರಲಿಯೆಂದು ನೂರು ಮದುವೆ ಮಾಡಬಲ್ಲೆ ಎಂದರೆ ಈಗ ಅದನ್ನೇ ನನ್ನಗೆ ಹಿಂದಿರುಗಿಸಿ ಮೂದಲಿಸುತ್ತಿರುವೆಯಲ್ಲ.”

“ತಮ್ಮ ಶಕ್ತಿ ಸಾಮರ್ಥ್ಯವನ್ನು ನೆನಪು ಮಾಡಿಕೊಟ್ಟೆ ಅಷ್ಟೆ.”

“ಕೈಕೆ, ದ್ರೌಪದಿಯರೂ ಮಾಡಿದ್ದು ಅಷ್ಟೇ ತಾನೆ?”

“ಬಿಡಿತು ಅನ್ನಿ, ಯಾವುದಕ್ಕೆ ಯಾವ ಹೋಲಿಕೆ! ”

“ಓಹೋ ನೀನೇ ಕವಿಯತ್ರಿಯಾಗಿರುವೆ.”

“ನನ್ನ ಸ್ಫೂರ್ತಿಯ ಖಣಿ ತಾವಿರುವಾಗ ಏಕಾಗಬಾರದು?” ಎಂದು ಅಬ್ಬಕಬ್ಬೆ ಭರವಸೆಯಿಂದಲೇ ನುಡಿದಳು. ಇತ್ತ ಮಲ್ಲಪ ಅದೇ ಗುಂಗಿನಲ್ಲಿ ಮೇಲೆದ್ದನು.

*          *          *          *

ಪಂಪ ಪೊನ್ನರಿಬ್ಬರೂ ಪುಂಗನೂರಿಗೆ  ಬಂದರು. ಮಲ್ಲಪ ಅವರಿದಿರು ಜಿನಚಂದ್ರರು ಕೊನೆಯ ಆಸೆಯನ್ನು ಮುಂದಿಟ್ಟನು. ದಿಗಂಬರ ಯತಿಯ ಬಾಯಿಂದ ಬಂದ ಮಾತು ವೇದವಾಕ್ಯವೆಂದು ಭಕ್ತಿಯಿಂದ ಅವರಿಗೆ ತಿಳಿಸಿ ಶಾಂತಿಪುರಾಣವನ್ನು ರಚಿಸಕೊಡಬೇಕೆಂದು ನಮ್ರನಾಗಿ ವಿನಂತಿ ಮಾಡಿಕೊಂಡನು. ಕನಿಷ್ಟ ನೂರು ಪ್ರತಿಯನ್ನಾದರೂ ಮಾಡಿಸಿ ಶಾಂತಿಪುರಾಣವನ್ನು ತನ್ನ ಮಗಳ ಮದುವೆಯಲ್ಲಿ ಮುತ್ತೈದೆಯರಿಗೆ ಹಂಚುವುದಾಗಿ ತಿಳಿಸಿದನು.

“ಈ ಯುಗದ ಕವಿಪುಂಗವನೆಂದರೆ ಪಂಪನೇ ಸೈ! ಶಾಂತಿಪುರಾಣವನ್ನೂ ಪಂಪನೇ ಬರೆಯಬೇಕು. ಜಿನಚಂದ್ರರ ಅಪೇಕ್ಷೆಯೂ ಅದೇ ಆಗಿತ್ತು” ಎಂದು ಪೊನ್ನಕವಿ ನೆನಪು ಮಾಡಿಕೊಟ್ಟನು.

"ಮಹಾಸ್ವಾಮಿ, ನನ್ನ ಮರ್ಮಾಘಾತ ಮಾಡಬೇಡಿ. ಅರಿಕೇಸರಿ ಪ್ರಭುಗಳಿಲ್ಲದೆ ಲೋಕದಲ್ಲಿ ನಾನು ಮತ್ತೆ ಕವಿಯಾಗಲಾರೆ ! ಮಹಪ್ರಭು ಸತ್ತ ದಿನವೇ ನನ್ನ ಪ್ರತಿಭಾನೇತ್ರ ಹಿಂಗಿ ಹೋಯಿತು ! ನನ್ನ ಕಲ್ಪನಾ ಪಕ್ಷ ಮುರಿದು ಬಿದ್ದಿತು ! ಪೊನ್ನಸ್ವಾಮಿ, ತಾವು ನಿರ್ವಿಕಾರಿಗಳು. ಸುಖದುಃಖಗಳನ್ನು ಸಮಚಿತ್ತದಿಂದ ನೋಡಬಲ್ಲ ಸ್ಥಿತಿ ಪ್ರಜ್ಞರು ! ಈ ಯುಗದ ಕವಿಚಕ್ರವರ್ತಿಗಳಾದ ತಾವೇ ಶಾಂತಿನಾಥನ ಭವ್ಯ ಚರಿತೆಯನ್ನು ಹಾಡಿಬಿಡಿ. ಬೃಹದ್‌ಗಾನಕ್ಕೆ ನಾನು ಸೂಲಗಿತ್ತಿಯ ಕಾರ್ಯಮಾಡುವೆನು. ಹಡಗುಮುಳುಗಿ ದಿವಾಳಿಯೆದ್ದ ವ್ಯಾಪಾರಿಯನ್ನು ಮತ್ತೆ ಮತ್ತೆ ಸಾಲ ಕೇಳಿ ನೋಯಿಸಬೇಡಿ. ತಾವು ಕವಿ ಚಕ್ರವರ್ತಿಗಳು ! ಶಾಂತಿನಾಥ, ತೀರ್ಥೇಶರಲ್ಲಿ ಚಕ್ರವರ್ತಿ ! ಬೃಹದ್ ಗಾನವನ್ನು ಪಾಡಾಳೂ ಸನ್ನದ್ಧರಾಗಿ ಮಹಾಸ್ವಾಮಿ !" ಎಂದು ಪಂಪ ಕವಿ ವಿನಮ್ರನಾಗಿ ಬೇಡಿಕೊಂಡನು. ಪುನ್ನಮಯ್ಯನೂ ಬಂದು ಪೊನ್ನನ ಕಾಲುಹಿಡಿದು, ವಾಗ್ದಾನ ನೀಡುವ ತನಕ ಪಾದವನ್ನು ಬಿಡಲ್ಲೊಲ್ಲೆನೆಂದು ಪಟ್ಟು ಹಿಡಿದನು. ಪೊನ್ನನಲ್ಲಿ ಭಗವದಾವೇಶ ಉಂಟಾಯಿತು. ಜಿನಚಂದ್ರರ ಮಹದಾಶೆಯ ನಿಶಾನೆ ಹಾರಾಡಿದಂತೆ ಭಾಸವಾಯಿತು ! ಲೋಕಕಲ್ಯಾಣಾರ್ಥವಾಗಿ ಮಹರ್ಷಿಗಳು ಶಾಂತಿನಾಥನ ಭವ್ಯ ಚರಿತೆಯನ್ನು ಹಾಡಿಸಬೇಕೆಂದು ಅಪೇಕ್ಷೆಪಟ್ಟುದನ್ನು ನೆನೆದಾಗ ಕುರುಳ್ಗಳ ಸವಣನಿಗೆ ರೋಮಾಂಚನವಾಯಿತು. ತಲೆಯ ಜಟೆ ನಿಮಿರಿತು ! ಕಣ್ಣಲ್ಲಿ ಸಮವಸರಣದ ಭವ್ಯತೆ ತುಳುಕಿತು ! ದಿವ್ಯನಾದ ನುಗ್ಗಿ ಬರುವಂತೆ ಗಂಟಲು ತನ್ನಷ್ಟಕ್ಕೆ ತಾನೇ ಏರಿಳಿತವಾಯಿತು !

"ಶಾಂತಿನಾಥ ಚರಿತೆಯನ್ನು ಬರೆಯುವೆನು. ಜಿನಚಂದ್ರರ ಅಂತಿಮ ಆಶೆ ನೆರೆವೇರಲಿ. ಪಂಪನ ಕೋರಿಕೆ ಈಡೇರಲಿ. ಮಲ್ಲಪನ ಹಾರೈಕೆ ಪೂರೈಕೆಯಾಗಲಿ. ಪುನ್ನಮಯ್ಯನ ಅಪೇಕ್ಷೆ ನೆರವೇರಲಿ ! ಅತ್ತಿಮಬ್ಬೆ ಹಾಗು ಗುಂಡುಮಬ್ಬೆಯರ ಬಾಳ್ವೆಗೆ ಶಾಂತಿಪುರಾಣವೇ ಧಾರ್ಮಿಕ ಕ್ರಾಂತಿಯನ್ನುಂಟುಮಾಡಲಿ !" ಎಂದು ಪೊನ್ನಕವಿ ಹಿಗ್ಗಿ ಆಶೀರ್ವಾದದ ಹೂ ಮಳೆಗರೆದನು.

ನಾಗಮಯ್ಯನ ಮನೆಗೆ ಮುತ್ತಿದ್ದ ಮಂಕೆಲ್ಲ ಪೊನ್ನ ಹಾಗು ಪಂಪ ಇವರು ಬಂದನಂತರ ಮಂಜಿನಂತೆ ಕರಗಿತು. ಸಂಸಾರ ಸಾರೋದಯನಾದ ಪಂಪ ಮಹಾಕವಿ ಇದ್ದ ತಾಣದಲ್ಲಿ ಬೇಸರ ತಲೆ ಹಾಕೀತೆ ? ನಿರಾಶೆ ಇಣಿಕೀತೆ? ಅತ್ತಿಮಬ್ಬೆ ಹಾಗು ಗುಂಡುಮಬ್ಬೆಯರಿಗೆ ಪಂಪನ ಸಾನ್ನಿಧ್ಯದಲ್ಲಿದ್ದಷ್ಟೂ ಅಜ್ಜನ ಬಳಿಯಿದ್ದಂತೆ ಹರ್ಷ ಮೂಡಿ ಬರುತ್ತಿತ್ತು. ಪಂಪನ ಬಾಯಿಂದ

ವಿಕ್ರಮಾರ್ಜುನ ವಿಜಯವನ್ನೂ ಆದಿಪುರಾಣವನ್ನು ಹಾಡಿಸಿದರು. ಅವನಿಂದ ತಾವೂ ಹೇಳಿಸಿಕೊಂಡರು. ಭರತಖಂಡದ ಭಗಿನಿಯರ ಕರ್ತವ್ಯವನ್ನು ಈ ಕನ್ನೆಯರಿಬ್ಬರೂ ಪಂಪನ ಪಾದಮೂಲದಲ್ಲಿ ಕಂಡು ಕೊಂಡರು. ಕಲೆಯಲ್ಲಿ ಧ್ವನಿಯಾಗಿ ಕರಗಿದ ನಿಲಾಂಜನಾ ಪಾತ್ರದ ಹಿರಿಮೆಯನ್ನು ಇವರು ಮನಗಂಡರು. ತಮ್ಮ ಸೊಗಸು. ತಮ್ಮ ಪ್ರತಿಭೆ, ತಮ್ಮ ಐಶ್ವರ್ಯ ಇವೆಲ್ಲ ಪರಮಾತ್ಮನಿಗೆ ಮೀಸಲಾದಾಗ ಬಾಳೆಲ್ಲ ಪಾವನವಾಗುವುದೆಂಬುದನ್ನು ಹರಯದ ಈ ಹೆಮ್ಮಕ್ಕಳು ಅರಿತುಕೊಂಡರು. ಏರುಂಜವ್ವನದಲ್ಲಿ ಧಾರ್ಮಿಕ ಹಿನ್ನೆಲೆ ಪಡೆಯದೇ ಹೋದರೆ ಮಾನವ ದಾನವನಾಗುವನು ! ದೈಹಿಕ ಶೃಂಗಾರಕ್ಕೆ ಪಾರಮಾರ್ಥಿಕ ಮೆರಗುಬೀಳದಿದ್ದರೆ ಸುರಸುಂದರಿಯರೆಲ್ಲ ವಿಷಕನ್ನೆಯರಾಗದಿರರೆಂಬುದನ್ನು ಪಂಪಕವಿ ಒತ್ತಿಒತ್ತಿ ನುಡಿದನು ! ಯೌವ್ವನದ ಲಂಪಟತನಕ್ಕೆ ಭಕ್ತಿಯ ಆತ್ಮಾಘಾತ ಅನಿವಾರ್ಯವೆಂಬುದನ್ನು ಪಂಪ ಕವಿ ಮತ್ತೆ ಮತ್ತೆ ನುಡಿದನು. ರಾಗದ್ವೇಷಗಳನ್ನು ಮನಮುಟ್ಟುವಂತೆ ವಿವರಿಸಿದನು. ಅತ್ತ ಪೊನ್ನಕವಿ ಕಾವ್ಯಕನ್ನೆಯನ್ನು ಕುಣಿಸುತ್ತಿದ್ದರೆ ಇತ್ತ ಪಂಪಕವಿ ಕನ್ನಡ ಕನ್ನೆಯರಿಗೆ ಕನ್ನಡ ಸಂಸ್ಕೃತಿಯ ಒಪ್ಪ ಹಾಕಿ ಕಾವ್ಯ ಕನ್ನೆಯರಾಗುವಂತೆ ತಿದ್ದುತ್ತಿದ್ದನು !

ಮಲ್ಲಪ ಗಂಡುಗಳನ್ನು ಹುಡುಕುವ ಕಾರ್ಯದಲ್ಲಿ ನಿರತನಾದನು. ಕಲಿತ ಹೆಣ್ಣು ಮಕ್ಕಳಿಗೆ ಗಂಡನ್ನೊಪ್ಪಿಸುವುದು ತುಂಬಕಷ್ಟ. ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ಶ್ರೀಮಂತ ಪುತ್ರಿಯರು; ಚಾಳುಕ್ಯ ಮಹಾಮಂತ್ರಿಯ ಮುದ್ದಿನ ಹೆಮ್ಮಕ್ಕಳು, ಇವರಿಬ್ಬರೂ ಸಿಂಗರಿಸಿಕೊಂಡು ನಿಂತಾಗ ಅಂಬರದಲ್ಲಾಡುವ ಖೇಚರ ವಿಮಾನಗಳಿಗೂ ಕೀಲಿಸಿದಂತಾಗಿ ಖೇಚರ ಕನ್ನೆಯರು ಅಂಬರದಲ್ಲಾಡುವ ಖೇಚರ ವಿಮಾನಗಳಿಗೂ ಕೀಲಿಸಿದಂತಾಗಿ ಖೇಚರ ಕನ್ನೆಯರು ಇವರ ಮೋಹಕ ರೂಪವನ್ನು ಕಂಡು ಮರುಳಾಗದಿರರು ! ಚೆಲುವು ನಲುವುಗಳೇ ಸಮಪಾಕಗೊಂಡು ಅವಳಿ ಜವಳಿಗಳಾದಂತೆ ಇವರು ಕಂಗೊಳಿಸುವರು. ಇವರಿಬ್ಬರೂ ನಾಟ್ಯವಾಡುವಾಗ ಗರಿಗೆದರಿದ ನವಿಲುಗಳು ಕಾಮನ ಬಿಲ್ಲನ್ನೇರಿ ಉಯ್ಯಾಲಾಡುವಂತೆ ರಮಣೀಯವಾಗಿರುವುದು! ಇವರು ನಡೆದುದೆಲ್ಲ ನರ್ತನವಾಗಿ ನುಡಿದುದೆಲ್ಲ ಸಂಗೀತವಾಗಿ ಮೋಹಕವಾಗಿರುವುದು. ಇದರ ಮೇಲೆ

ಆಗಮ ಮತ್ತು ಕಾವ್ಯ ಇವೆರಡರಲ್ಲೂ ಇವರು ಪಾರಂಗತರಾಗಿದ್ದರು. ಇಂಥ ಕಲಾವತಿಯರಿಗೆ ಗಂಡುಗಳನ್ನು ಹೊಂಚುವುದು ಸುಲಭವೆ ?

"ಪಂಪದೇವ, ನಮ್ಮ ಹೆಣ್ಣುಮಕ್ಕಳಿಗೆ ಗಂಡುಗಳು ಬೇಕಲ್ಲ ?"

"ನನ್ನ ಕೇಳುವುದಾದರೆ ರಾಜಪುತ್ರರನ್ನೇ ನೋಡುವುದು ಒಳ್ಳೆಯದು."

"ನಾವಾಗಿ ರಾಜಪುತ್ರರನ್ನು ಹುಡುಕುವುದು ಸರಿಯಾದೀತೆ? ಅವರವರ ಅಂತಸ್ತು ಅವರಿಗಿರಬೇಡವೆ ?"

"ಮಲ್ಲಪ, ನಿನ್ನ ಮಕ್ಕಳನ್ನು ಮದುವೆಯಾಗಬೇಕಾದರೆ ರಾಜಪುತ್ರರೂ ಪುಣ್ಯ ಮಾಡಿರಬೇಕು."

"ನಮ್ಮಷ್ಟಕ್ಕೆ ನಾವೇ ನಮ್ಮ ಬಂಗಾರ ಅಪ್ಪಟವೆಂದುಕೊಂಡರೆ ಹೇಗಪ್ಪ?"

"ಅಪ್ಪಟ ಬಂಗಾರ ಎಲ್ಲಿದ್ದರೂ ಅಪರಂಜಿಯೆ ! "

"ರಾಜಪುತ್ರರಲ್ಲಾದರು ನಮಗೆ ಸರಿಹೊಂದುವವರಿದ್ದಾರೆಯೆ?"

"ಏಕಿಲ್ಲ ಮಲ್ಲಪ? ರಾಷ್ಟ್ರಕೂಟರ ಕರ್ಕ ಯುವರಾಜರಿದ್ದಾರೆ. ಇನ್ನೊಂದು ಕಡೆ ಗಂಗರ ಮಾರಸಿಂಹರ ತಮ್ಮ ರಾಚಮಲ್ಲ ಇದ್ದಾರಲ್ಲ. ಹೇಗೂ ಗಂಗರೂ ರಾಷ್ಟ್ರಕೂಟರೂ ಮೊದಲಿಂದ ನಂಟರಾಗಬೇಕು. ಒಬ್ಬರಿಗೊಬ್ಬರು ಹಿತಚಿಂತಕರಾಗಿ ಈ ಎರಡು ಮನೆತನಗಳೂ ಶತಮಾನ ಶತಮಾನಗಳಿಂದ ಪ್ರಬುದ್ಧಮಾನಕ್ಕೆ ಬಂದಿವೆ. ಇದರ ಮೇಲೆ ಈ ರಾಜಮನೆತನಗಳು ಜೈನಧರ್ಮ ಪ್ರದೀಪಕಳಾಗಿ ಅಹಿಂಸೆಗೆ ತೌರೂರಾಗಿವೆ. ಇಂಥ ರಾಜಪುತ್ರರಿರುವಾಗ ಸಮ್ಯಕ್ತ್ವ ಚೂಡಾಮಣಿಗಳಾದ ತಮ್ಮ ಕುವರಿಯರು ಮನೆಯಲ್ಲಿ ಕೊಳೆಯಬೇಕೆ ?"

"ಅವರು ನಮ್ಮ ಮನೆಯಲ್ಲಿ ಸಂಬಂಧ ಬೆಳೆಸಲು ಒಪ್ಪಿಯಾರೆ?"

"ಅವರು ಒಪ್ಪುವ ಮುನ್ನ ನಮ್ಮ ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ಅವರನ್ನು ಒಪ್ಪುವರೋ ಇಲ್ಲವೊ ಕಂಡವರಾರು?" ಎಂದು ನಗೆಯಡಿದನು.

ಒಂದೆರಡು ದಿನ ಕಳೆವಾಗ ಚಾಲುಕ್ಯರ ಮಹಾಂತ್ರಿ ದಲ್ಲಪ ಪುಂಗನೂರಿಗೆ ಬಂದವನು ನೇರವಾಗಿ ಮಲ್ಲಪನ ಮನೆಗೆ ಬಂದನು. ಅನ್ಯೋನ್ಯವಾಗಿ ಯೋಗಕ್ಷೇಮವನ್ನು ವಿಚಾರಿಸಿಕೊಂಡರು.

ಊಟೋಪಚಾರ ಶ್ರೀಮಂತರಿಗನುಗುಣಾವಾಗಿ ಸಂಭ್ರಮ ದಿಂದಲೂ ಸಡಗರದಿಂದಲೂ ನಡೆಯಿತು ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರೇ ಅಂದು ಎಲ್ಲರಿಗೂ ಊಟಕ್ಕೆ ಬಡಿಸಿದರು. ಸುರಕನ್ಯೆಯರು ಬುವಿಗಿಳಿದು ಅಮೃತವನ್ನು ಬಡಿಸುತ್ತಿರುವಂತೆ ಕಂಗೊಳಿಸಿತು. ದಲ್ಲಪ ತುಸು ಹೆಚ್ಚಾಗೇ ಉಂಡನು. ಪಂಪಕವಿಗೆ ಅರಿಕೇಸರಿಯ ನೆನಪಾಯಿತು. ಅರಿಕೇಸರಿಯೂ ತಾನೂ ಸಹಪಂಕ್ತಿಯಲ್ಲಿ ಕುಳಿತಾಗ ಮಹಾರಾಣಿಯೇ ಬಂದು ಬಡಿಸುತ್ತಿದ್ದ ದಿವ್ಯದೃಶ್ಯ ಕಣ್ಣೆದಿರು ಬಂದಂತಾಯಿತು. ಊಟ ಮುಗಿಯಿತು. ತಾಂಬೂಲ ಜಗಿಯುತ್ತ ಮಲ್ಲಪನೊಡನೆ ದಲ್ಲಪ ಲೋಕಾಭಿರಾಮವಾಗಿ ಮನಬಿಚ್ಚಿ ಮಾತಾಡಿದನು.

"ನಾಗಮಯ್ಯ ಹೋದುದು ನಮ್ಮ ಸಮಾಜಕ್ಕೇ ಒಂದು ದೊಡ್ಡ ಪೆಟ್ಟು" ಎಂದುದಲ್ಲಪ ತನ್ನ ಸಂತಾಪವನ್ನು ಸೂಚಿಸಿದನು.

"ನಮ್ಮ ಕೈಲಿ ಏನಿದೆ ದಲ್ಲಪ? ಇನ್ನು ನಮಗೆಲ್ಲ ಹಿರಿಯರಾಗಿ ತಾವಿರುವಿರಿ. ಮಾರ್ಗದರ್ಶನ ಮಾಡಬೇಕು" ಎಂದು ಮಲ್ಲಪ ವಿನಯವಾಗಿ ನುಡಿದನು.

"ನಿಮಗೆ ನನ್ನ ಮಾರ್ಗದರ್ಶನವೇ ! ಚೆನ್ನಾಯಿತು."

"ತಾವು ನನಗಿಂತ ಹಿರಿಯರು. ಮಾರ್ಗದರ್ಶನವನ್ನೂ ಮಾಡಬೇಕು, ಜೊತೆಗೆ ಆಶೀರ್ವಾದವನ್ನು ಮಡಬೇಕು. ತಮ್ಮ ಮಾತನ್ನು ನಾನು ಶಿರದಲ್ಲಿ ಧರಿಸಿ ನಡೆಯುವೆನು. ಮನೆಗೊಬ್ಬರು ಹಿರಿಯರಿದ್ದರೆ ಮೇಲು. ಜವಾಬ್ದಾರಿ ಅವರ ಮೇಲೆ ಹೇರಿ ನಾವು ಹಾಯಾಗಿರಬಹುದು."

"ಮಲ್ಲಪ, ಈಗ ನೀವೇ ಹಿರಿಯರಾಗಿರುವಿರಿ. ತಿಳಿದಂತೆ ನಡೆಯಬೇಕು. ನಾಗಮಯ್ಯನಂಥ ಸಾತ್ವಿಕ ಶಿರೋಮಣಿಯ ಸಂಜಾತರಾದ ತಾವು ಸರಿಯಾದ ಮಾರ್ಗದಲ್ಲೇ ನಡೆಯುವಿರಿ. ನೀವೂ ನಿಮ್ಮ ಅನುಜ ಪೊನ್ನಮಯ್ಯ ಇಂದು ನಮ್ಮ ರಾಜಕೀಯಕ್ಕೆ ಎರಡು ರೆಕ್ಕೆಗಳಿದ್ದಂತೆ. ನಮ್ಮ ಸಮಾಜಕ್ಕೆ ಎರಡು ಕಣ್ಣಿದ್ದಂತೆ !"

"ದಲ್ಲಪ, ನಮ್ಮನ್ನು ತುಂಬ ಹೊಗಳುತ್ತಿರುವಿರಿ. ನಾವೇನೋ ರೆಕ್ಕೆಗಳು ಹಾಗು ಕಣ್ಣುಗಳು. ತಾವಾದರೋ ನಮ್ಮ ಸಮಾಜದ ಮೆದುಳಾಗಿರುವಿರಿ ! ರೆಕ್ಕೆಗಳೂ ಕಣ್ಣುಗಳೂ ಮೆದುಳು ಹೇಳಿದಂತೆ ಕೇಳಬೇಕಲ್ಲ !" ಎಂದು ಮಲ್ಲಪ ಆತನನ್ನು ಕೊಂಡಾಡಿದನು.

“ಮಲ್ಲಪ, ನಿಮ್ಮನ್ನು ಮಾತಿನಲ್ಲಿ ಸೋಲಿಸುವುದು ಯಾರಿಂದಾದೀತು? ಅತ್ತ ಪೊನ್ನಮಯ್ಯನನ್ನು ರಣರಂಗದಲ್ಲಿ ಸೋಲಿಸಲು ಯಾರಿಂದ ಸಾಧ್ಯ !”

“ಅಹುದು ನಾನು ಮಾತಿನಮಲ್ಲ” ಎಂದು ಮಲ್ಲಪ ನಗೆಯಾಡಿದನು.

“ನೋಡು ಮಲ್ಲಪ, ನಾನು ಬಂದ ಕಾರ್ಯವನ್ನೇ ಮರೆತುಬಿಟ್ಟೆ. . . . .”

“ನಿಸ್ಸಂಕೋಚವಾಗಿ ಹೇಳಿ ದಲ್ಲಪ.”

“ನಮ್ಮ ನಾಗದೇವರನ್ನು ತಾವೂ ನೋಡಿರಬೇಕಲ್ಲ ?”

“ನೋಡದೇ ಉಂಟೆ?”

“ಅವನಿಗೆ ಮದುವೆ ಮಾಡಬೇಕಾಗಿದೆ. ಬೇಕಾದಷ್ಟು ಕಡೆಯಿಂದ ಹೆಣ್ಣಿನವರು ಬರಾತ ಮಾಡುತ್ತಿರುವರು. ನಾಗಮಯ್ಯನವರು ಒಮ್ಮೆ ನಮ್ಮಲ್ಲೇ ಸಂಬಂಧ ಬೆಳಸಬೇಕು ಎಂದು ನನ್ನೊಡನೆ ಹೇಳಿದ್ದರು. ತಮ್ಮನ್ನು ಕೇಳದೆ ಮಗನ ಮದುವೆಮಾಡೇನೆ ಎಂದು ನಾನು ಒಪ್ಪಿಕೊಂಡಿದ್ದೆ. ಅವರಿದ್ದಿದ್ದರೆ ನನಗೆ ಪ್ರತಿ ಹೇಳುತ್ತಿರಲಿಲ್ಲ. ತಮ್ಮನ್ನೂ ಕಂಡು ತಮ್ಮ ತಂದೆಯರ ಅಪೇಕ್ಷೆಯನ್ನು ತಮ್ಮ ಕಿವಿಗೂ ಹಾಕಿ ಬಿಡೋನ ಎಂದು ಇತ್ತ ಬರಬೇಕಾಯಿತು.” ಎಂದು ದಲ್ಲಪ ಸಂಕೋಚದಿಂದ ನುಡಿದನು.

“ದಲ್ಲಪ, ತಮ್ಮ ಅಭಿಪ್ರಾಯ ಗೊತ್ತಾಯಿತು. ನಮ್ಮ ತಂದೆ ಮಾತು ಕೊಟ್ಟಿದ್ದರೆ ನಾವು ತೆಗೆದು ಹಾಕೇವೆ? ಆದರೂ ನನ್ನ ಹೆಂಡತಿ ಮಕ್ಕಳನ್ನು ವಿಚಾರಿಸಬೇಕಲ್ಲ. ನನ್ನ ತಮ್ಮನನ್ನೂ ಒಂದು ಮಾತು ಕೇಳಿ ನೊಡಬೇಕು. ತಾವು ಬಂದದೂ ಒಳ್ಳೆಯದಾಯಿತು. ಒಂದೆರಡು ದಿನ ಇಲ್ಲೇ ಹಾಯಾಗಿರಿ. ಯಾವುದನ್ನೂ ತಿಳಿಸುವೆನು” ಎಂದು ಮಲ್ಲಪ ಭರವಸೆಯಿತ್ತನು.

ಮರುದಿವಸ ಚಾಮುಂಡರಾಯ ಪುಂಗನೂರಿಗೆ ಬಂದು ಮಲ್ಲಪನನ್ನು ಕಂಡನು.

“ರಾಯರು ಒಂದು ಮಾತು ಮುಂಚಿತವಾಗಿ ಹೇಳಿಕಳಿಸಬಾರದಾಗಿತ್ತೆ? ರಾಜ ಮರ್ಯಾದೆಯಲ್ಲಿ ತಮ್ಮನ್ನು ಎದುರುಗೊಳ್ಳುತ್ತಿದ್ದೆನಲ್ಲ ! ಗಂಗರಾಜರ ರಾಜ ಗುರುವೂ ವೀರಮಾರ್ತಾಂಡರು ಮಹಾಮಂತ್ರಿಗಳೂ ರಣಗಲಿಯೂ ಆದ ತಾವು ಮುನ್‌ಸೂಚನೆ ಕೊಡದೆ ಬರಬಹುದೇ ರಾಯರೇ?” ಎಂದು ಮಲ್ಲಪ ಕೈ ಕೈ ಹಿಸುಕಿಕೊಂಡನು.

“ತಮ್ಮ ತಂದೆ ಪರಂಧಾಮವೈದಿದಾಗ ನಾನು ರಣರಂಗದಲ್ಲಿದ್ದೆನು. ಬಿಟ್ಟು ಬರಲಾಗಲಿಲ್ಲ. ಅದರಿಂದಾಗಿ ನಮ್ಮ ತಾಯಿ ಮತ್ತು ತಂದೆ ಮಾತ್ರ  ಬಂದರು. ನಾಗಮಯ್ಯನ ಸಾವಿನಿಂದಾಗಿ ನಮ್ಮ ಸಮಾಜದ ಅನರ್ಘ್ಯ ರತ್ನವನ್ನು ಕಳೆದು ಕೊಂಡಂತಾಯಿತು,” ಎಂದು ಚಾಮುಂಡರಾಯ ಸಂತಾಪ ಸೂಚಿಸಿದನು.

“ತಮ್ಮಂಥ ಹಿತಚಿಂತಕರು ಇರುವಾಗ ತಂದೆತಾಯನ್ನು ಕಳೆದುಕೊಂಡಿದ್ದರೂ ಖಂಡಿತ ನಾವು ತಬ್ಬಲಿಗಳಲ್ಲ !” ಎಂದು ಮಲ್ಲಪ ಭರವಸೆಯಿಂದ ನುಡಿದನು.

“ನಾಗಮಯ್ಯನ ಹಿರಿಮೆಯನ್ನು ದಿನವೂ ನಮ್ಮ ತಾಯಿ ಮುಕ್ತಕಂಠದಿಂದ ಕೊಂಡಾಡುವಳು. ನಮ್ಮ ತಂದೆಯಂತೂ ಬಾಳಿದರೆ ನಾಗಮಯ್ಯನಂತೆ ಬಾಳಬೇಕು ಎಂದು ಕಂಡವರ ಮುಂದೆಲ್ಲ ಹೊಗಳುವರು. ಆಗಾಗ ನಾಗಮಯ್ಯನವರನ್ನು ನೆನೆದು ಕಂಬನಿಯನ್ನೂ ಮಿಡಿಯುವರು. ಅಂಥ ಮಹಾಪುರುಷನ ಸಾವು ಕರ್ಣಾಟಕ್ಕೇನೆ ತುಂಬಲಾರದ ನಷ್ಟ!”

“ತಮ್ಮಂಥ ಮಹಾಮಹಿಮರು ಮೆಚ್ಚಿಕೊಂಡಿರುವಾಗ ನಮ್ಮ ತಂದೆ ಸತ್ತಿದ್ದರು ಬದುಕಿದ್ದಂತೆಯೇ!” ಎಂದು ಮಲ್ಲಪ ಕಣ್ಣಂಚಿನಲ್ಲಿ ಮಿಡಿದು ಬಂದ ಕಂಬನಿಯನ್ನು ಒರೆಸಿಕೊಳ್ಳುತ್ತ “ನಾನೆಂಥ ಬೆಪ್ಪ ! ದೂರದಿಂದ ಬಂದವರ ಊಟೋಪಚಾರವನ್ನೂ ವಿಚಾರಿಸದೆ ಮಾತಾಡುತ್ತ ಕುಳಿತೆನಲ್ಲ” ಎಂದು, ಚಾಮುಂಡರಾಯನನ್ನು ಸ್ನಾನಕ್ಕೇಳಿಸಿದನು.

ಅಡಿಗೆಮನೆಯಲ್ಲಿ ಅವಸರವೋ ಅವಸರ. ನೆನ್ನೆಯೆಲ್ಲ  ಚಾಲುಕ್ಯ ಮಹಾಮಂತ್ರಿಗೆ ಸತ್ಕಾರಕೂಟವಾಯಿತು. ಈ ದಿನ ಗಂಗರ ಮಹಾಮಂತ್ರಿ ಚಾಮುಂಡರಾಯನಿಗೆ ಆತನ ಘನತೆಗೊಪ್ಪುವಂತೆ ಔತಣವಾಗಬೇಕು. ಅವರವರ ಯೋಗ ಅವರದು. ಹಸಿದವರು ಅಂಗಲಾಚಿದರೂ ಅನ್ನ ಸಿಗುವುದು ಕಷ್ಟ. ಯಾರೂ ತಿನ್ನದ ತಂಗಳೇ ಅವರ ಗತಿ. ಶ್ರೀಮಂತರು ಎಲ್ಲಿ ಹೋದರೂ ಅವರ ಪುಣ್ಯವೇ ಅವರನ್ನು ಸತ್ಕರಿಸುವುದು !

ಸಹಪಂಕ್ತಿಯಲ್ಲಿ ಕನ್ನಡನಾಡಿನ ಮಹಿಮಾಂತರೆಲ್ಲ ಔತಣಕ್ಕೆ ಕುಳಿತರು. ನೆನ್ನೆತಾನೆ ಬಂದ ದಲ್ಲಪ, ಬಹುದಿನದಿಂದ ಇಲ್ಲೇ ಇದ್ದ ಪಂಪ ಮಹಾಕವಿ, ಹೊಸದಾಗಿ ಬಂದಿರುವ ಚಾಮುಂಡರಾಯ ಇವರೊಡನೆ ಮಲ್ಲಪ, ಪೊನ್ನಮಯ್ಯ ಹಾಗೂ ಮಲ್ಲಪನ ಗಂಡುಮಕ್ಕಳೆಲ್ಲ

ಕುಳಿತರು. ಮಲ್ಲಪನ ಹೆಂಡತಿ ಅಬ್ಬಕಬ್ಬೆ ಪೊನ್ನಮಯ್ಯನ ಹೆಂಡತಿ ಕೌಸಲ್ಯಬ್ಬೆ ಬಡಿಸಲು ಬಂದರು. ಇವರ ಸಹಾಯಕ್ಕೆ ಅತ್ತಿಮಬ್ಬೆಯೂ ಗುಂಡುಮಬ್ಬೆಯೂ ಧಾವಿಸಿದರು. ಚಿನ್ನದ ಪಾತ್ರೆಗಳಲ್ಲಿ ಬೆಳ್ಳಿಯ ಸೌಟುಗಳು. ಚಿನ್ನದ ಬಳ್ಳದಲ್ಲಿ ರತ್ನವನ್ನು ತುಂಬಿದಂತೆ ಕಂಗೊಳಿಸುವ ಅನ್ನ ಭಕ್ಷ್ಯಪಾಯಸ ಶಾಕಪಾಕ ಮುಂತಾದ ಸುಭಕ್ಷ್ಯ ಸುಪಕ್ವ ಫಲಗಳನ್ನು ನೋಡುವವರ ಕಣ್ಣಿಗೆ ಹಿತವಾಗುವಂತೆ ಜೋಡಿಸಿ ಇಟ್ಟುಕೊಂಡಿದ್ದರು. ಮಿಂಚಿನ ಲತೆಗಳಂತೆ  ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ಸುಳಿದಾಡಿ ಎಲ್ಲರ ಎಡೆಯಲ್ಲೂ ಪಕ್ವಾನ್ನವನ್ನು ಬಡಿಸುವಾಗ ಹಣ್ಣಾದ ಕಲ್ಪಲತೆ ತಮ್ಮತ್ತ ಬಾಗಿದಂತೆ ಭಾಸವಾಗುತ್ತಿತ್ತು. ಎಲ್ಲರ ಮುಂದೂ ಚಿನ್ನದ ಹರಿವಾಣ, ಹರಿವಾಣದ ಅಂಚಿನಲ್ಲಿ ಬಂಗಾರದ ಸಾಲು ಬಟ್ಟಲುಗಳು. ಬಿಟ್ಟಲು ಬಟ್ಟಲಿಗೂ ಬೆಳ್ಳಿಯ ಪುಟ್ಟ ಸಟ್ಟುಗಗಳು ! ಅತ್ತಿಮಬ್ಬೆ ಗುಂಡುಮಬ್ಬೆಯರು ಅಂದುಗೆಗಳನ್ನು ಗಿಲಿಗುಟ್ಟಿಸಿಕೊಂಡು ಸುಳಿದಾಗ ಚಿಂತಾಮಣಿಯನ್ನು ಹಿಡಿದು ಸುರಕನ್ನೆಯರು ಸುಳಿದಂತಾಗುತ್ತಿತ್ತು ! ಸಡಗರದಿಂದ ಸಂತಸದಿಂದ ಸ್ವೈರಣೆಯಿಂದ ಈ ವನಿತೆಯರು ಬಡಿಸುತ್ತಿದ್ದರು.

"ಸಂಸಾರ ಸಾರೋದಯವೆಂದರೆ ಔತಣದೂಟವೇ ಇರಬೇಕು" ಎಂದು ಚಾಮುಂಡರಾಯ, ಪಂಪನನ್ನು ಕುರಿತು ಹೇಳಿದನು.

"ಕೇವಲ ಔತಣದೂಟ ಸಂಸಾರಸಾರೋದಯವಾಗಲಾರದು. ಇಂಥ ಊಟಕ್ಕೆ ತಮ್ಮಂಥ ಮಹಾಮಹಿಮರು ಕುಳಿತಾಗ ನನ್ನಂಥ ಬಡ ಕವಿಯೂ ಅವಕಾಶವನ್ನು ಪಡೆದು ಸಂಸಾರಸಾರೋದಯನಾಗಿರುವೆನು" ಎಂದು ಪಂಪ ಕವಿ ಮುಗುಳ್ನಕ್ಕನು.

"ಪಂಪಮಹಾಕವಿ, ತಾವು ಬಡವರೇ? ಕತ್ತಿ ಹಿಡಿದಾಗ ತಾವು ಚತುರಂಗಬಲ ಭಯಂಕರಣಂ ! ಲೇಖಣಿ ಹಿಡಿದಾಗ ವಿಶ್ವಕವಿ ದುಂದುಭಿನಿನಾದಂ ! ಊಟಕ್ಕೆ ಕುಳಿ ತಾಗ ಸಂಸಾರಸಾರೋದಯಂ !ನಾವೋ ಇದ್ದೂ ಇಲ್ಲದಂತೆ" ಎಂದು ಚಾಮುಂಡರಾಯ ತರ್ಕಬದ್ಧವಾಗಿ ನುಡಿದನು.

"ತಾವೂ ಅಜರಾಮರರೇ. ತಮ್ಮ ಸಾಹಸವನ್ನೂ ಸಹೃದಯತೆಯನ್ನೂ ಮಿಗಿಲಾಗಿ ತಮ್ಮ ಜಿನಭಕ್ತಿಯನ್ನೂ ನನ್ನಂಥ ಹತ್ತು ಕವಿಗಳು ಮುಕ್ತಕಂಠರಾಗಿ ಹೊಗಳಾದಿರರು. ನಾಡಿನ

ಮೂಲೆಮೂಲೆಯಲ್ಲು ತಮ್ಮ ಸಾಹಸವನ್ನು ಸಾರುವ ಶಿಲಾಫಲಕಗಳು ಈಗಾಗಲೇ ಸ್ಥಾಪಿತಗೊಂಡಿವೆ !" ಎಂದು ಪಂಪಕವಿ ಚಾಮುಂಡರಾಯನನ್ನು ಕೊಂಡಾಡಿದನು.

"ತಮ್ಮಿಬ್ಬರ ವಾದವಿದದಿಂದ ಒಂದಂಶ ಸ್ಪಷ್ಟವಾಯಿತು !" ಎಂದು ದಲ್ಲಪ ಮಧ್ಯೆ ಬಾಯಿ ಹಾಕಿದನು.

"ಸ್ಪಷ್ಟವಾಯಿತು ! ಏನೋ?" ಎಂದು ಚಾಮುಂಡರಾಯ ದಲ್ಲಪನ ಕಡೆ ತಿರುಗಿದನು.

"ಅದೇ ಪಂಪಮಹಾಕವಿಯನ್ನು ತಾವು ಅಮರರೆಂದು ಮನಸಾರೆ ಕರೆದಿರುವಿರಿ. ತಮ್ಮನ್ನು ಪಂಪಕವಿ ಅಜರಾಮರರೆಂದು ಕೊಂಡಾಡುತ್ತಿರುವರು. ತಮ್ಮಿಬ್ಬರ ನಡುವೆ ಸಿಕ್ಕಿಕೊಂಡು ನಮ್ಮಂಥವರೂ ಈಗ ಪುನೀತರಾದಂತಾಯಿತು. ಅತ್ತ ಇತ್ತ ಅಯಸ್ಕಾಂತವಿರುವಗ ಕಬ್ಬಿಣದ ಚೂರು ಪಾರುಗಳೆಲ್ಲ ಕಬ್ಬಿಣವಾಗಿ ಉಳಿದಾವೆ?" ಎಂದು ದಲ್ಲಪ ನಕ್ಕನು.

"ಹೌದು ದಲ್ಲಪ, ತಾವು ಉಕ್ಕಿನ ಮನುಷ್ಯರೇ ! ರಣರಂಗದಲ್ಲಿ ತಮ್ಮ ಕೈಗೆ ಸಿಕ್ಕಿ ವಿಲಿವಿಲಿ ಒದ್ದಾಡಿದವರೆಲ್ಲ ತಮ್ಮನ್ನು ತಿಮಿಂಗಿಲವೆಂದೇ ಕರೆಯುತ್ತಿರುವರು !" ಎಂದು ಚಾಮುಂಡರಾಯ ಮುಗುಳ್ನಕ್ಕನು.

"ತಾವು ಮೂವರೂ ಒಂದೊಂದು ದೃಷ್ಟಿಯಲ್ಲಿ ತಿಮಿಂಗಿಲಗಳೇ ! ಪಂಪದೇವರು ಕವಿ ತಿಮಿಂಗಿಲ !ಚಾಮುಂಡರಾಯರೂ ದಲ್ಲಪರೂ ರಣರಂಗ ತಿಮಿಂಗಿಲಗಳು !" ಎಂದು ಮಲ್ಲಪ ಹಾಸ್ಯದ ಚಟಾಕಿ ಹಾರಿಸಿದನು.

"ಮಾತಿನಮಲ್ಲರು ಬಾಯ್ದೆರೆದರೆ ಹಾಸ್ಯರಸದ ತೂಬು ತೆರೆದಂತಾಗುವುದಲ್ಲ !" ಎಂದು ಪಂಪಕವಿ ನಸುನಕ್ಕನು.

"ನನಗೆ ಗೊತ್ತಿರುವ ರಸಗಳೆಂದರೆ ಷಡ್‌ರಸಗಳೇ" ಎಂದು ಮಲ್ಲಪ ನಗೆಯಾಡಿದನು.

"ಎಲ್ಲರ ರಸಗಳಿಗೂ ಮೂಲ ಷಡ್‌ರಸಗಳೇ ತಾನೆ?" ಎಂದು ದಲ್ಲಪ ಕಿರುನಗೆ ನಕ್ಕನು. ಈ ವೇಳೆಗೆ ಊಟ ಮುಗಿಯಿತು. ಎಲ್ಲರೂ ತಿಂದು ತೇಗಿದರು.

ಮಧ್ಯಾಹ್ನದ ಉರಿಬಿಸಿಲು ಕಂದಿದಮೇಲೆ ಮಲ್ಲಪನ ಸಭಾಬವನದಲ್ಲಿ ಮತ್ತೊಮ್ಮೆ ಬಂಧುಮಿತ್ರರೆಲ್ಲ ಕಲೆತರು. ಪಂಪಕವಿ ಕಾವ್ಯದ ಜೀವನಾಡಿಯಾದ ರಸದಂತೆ ಅಂದಿನ ಕೂಟಕ್ಕೆ

ತಿಲಕಪ್ರಾಯನಾಗಿದ್ದನು. ಪಂಪನ ಒಂದು ಪಕ್ಕದಲ್ಲಿ ಚಾಮುಂಡರಾಯ ಒರಗು ದಿಂಬಿಗೆ ಬೆನ್ನನ್ನು ಆನಿಸಿ ಕುಳಿತನು. ಇನ್ನೊಂದು ಪಕ್ಕದಲ್ಲಿ ದಲ್ಲಪ ಮಂಡಿಸಿದನು. ಮಲ್ಲಪ ನಮ್ರನಾಗಿ ಎಲ್ಲರಿಗೂ ಎದ್ದು ಕಾಣುವಂತೆ ಕುಳಿತನು. ಪಾನಕ ಪನಿವಾರಯಿತು. ಆ ವೇಳೆಗೆ ಪೊನ್ನ ಕವಿ ಆಗಮಿಸಿ ಉನ್ನತಾಸನದಲ್ಲಿ ವಿರಾಜಮಾನನಾದನು. ಅಲ್ಲಿದ್ದವರಿಗೆಲ್ಲ ವಯಸ್ಸಿನಲ್ಲಿ ಪಂಪಕವಿ ದೊಡ್ಡವನಾದರೂ ಪೊನ್ನಕವಿ ಕುರುಳ್ಗಳ ಸವಣನಾದುದರಿಂದ ಎಲ್ಲರೂ ಈತನಿಗೆ ತಲೆಬಾಗಿ ನಮಸ್ಕರಿಸಿದರು. ಪೊನ್ನಕವಿ "ಧರ್ಮವೃದ್ಧಿರಸ್ತು" ಎಂದು ಎಲ್ಲರನ್ನೂ ಹರಸಿದನು.

"ನೇಮಿಚಂದ್ರಾಚಾರ್ಯರು ಕ್ಷೇಮವೇ?" ಎಂದು ಪೊನ್ನಕವಿ ಚಾಮುಂಡರಾಯನನ್ನು ಪ್ರಶ್ನಿಸಿದನು.

"ಕ್ಷೇಮವಾಗಿದ್ದಾರೆ ಸ್ವಾಮಿ. ತಮ್ಮ ಕುಶಲವನ್ನು ತಿಳಿದುಕೊಂಡು ಬರಬೇಕೆಂದು ನನ್ನೊಡನೆ ಒತ್ತಾಯಪೂರ್ವಕ ಹೇಳಿದರು ಸ್ವಾಮಿ," ಎಂದು ಪೊನ್ನಕವಿ ಚಾಮುಂಡರಾಯ ಬಿನ್ನವಿಸಿದನು.

"ನೇಮಿಚಂದ್ರಾಚಾರ್ಯರು ಇಂದಿನ ಸಾಧುಗಳಲ್ಲಿ ತಿಲಕಪ್ರಾಯರಾಗಿರುವರು. ಜೈನಸಿದ್ಧಾಂತ ಪಾರಂಗತರೆಂದರೆ ಅವರೇ ! ಜೈನಾಗಮಗಳನ್ನು ಕುರಿತು ಅವರಂತೆ ವ್ಯಾಖ್ಯಾನಮಾಡಬಲ್ಲವರಾರು ? ನಮ್ಮ ಕಾಲಕ್ಕೆ ಆ ಮಹರ್ಷಿಗಳೇ ವೀರಸೇನರು !" ಎಂದು ಪೊನ್ನಕವಿ, ಆಚಾರ್ಯರನ್ನು ಕೊಂಡಾಡಿದನು.

"ಜೀವ ಮತ್ತು ಕರ್ಮಗಳ ವಿಚಿತ್ರ ವಿನ್ಯಾಸವನ್ನು ವೈಜ್ಞಾನಿಕವಾಗಿ ವಿವರಿಸಿ ನೇಮಿ ಚಂದ್ರಾಚಾರ್ಯರು ಗೋಮಟಸಾರವನ್ನು ಬರೆದು ಮುಗಿಸಿದರು ಸ್ವಾಮಿ !" ಎಂದು ಚಾಮುಂಡರಾಯ ಹೆಮ್ಮೆಯಿಂದ ತಿಳಿಸಿದನು.

"ಅವರು ಸುಮ್ಮನಿರುವ ಚೇತನವಲ್ಲ. ಏನಾದರೂ ಮಾಡೇಮಾಡುವರು. ಅಂದ ಹಾಗೆ ನಮಗೇನಾದರೂ ಅದರ ಪ್ರತಿ ಉಂಟೋ ಇಲ್ಲವೊ?"

"ಇಲ್ಲದೆ ಉಂಟೇ ಸ್ವಾಮಿ. ಗೋಮಟಸಾರದ ನೂರು ಪ್ರತಿಗಳನ್ನು ನನ್ನ ಮಗ ಜಿನ್ನಣ್ಣನ ಮದುವೆಯಲ್ಲಿ ಹಂಚಬೇಕೆಂದಿರುವೆನು. ಅದರ ಪ್ರಕಾಶನವನ್ನೂ ಆ ಸಂದರ್ಭದಲ್ಲಿ ಇಟ್ಟುಕೊಂಡಿರುವೆನು.

"ರಾಯರೆ, ನಾವು ಒಳ್ಳೇ ಕಾಲದಲ್ಲಿ ಬದುಕಿದಂತಾಯಿತು. ಜಿನಭಕ್ತರು ಮದುವೆ ಮುಂಜಿಗಳಲ್ಲಿ ಗ್ರಂಥ ಪ್ರಕಾಶನ ಇಟ್ಟುಕೊಳ್ಳುತ್ತ ಬಂದರೆ, ಜೈನ ಸಂಸ್ಕೃತಿ ಅಚ್ಚಳಿಯದಂತೆ ನಿಂತೀತು. ಕಾಮ ಪ್ರಧಾನವಾದ ವಿವಾಹಕ್ಕೆ ಧರ್ಮವನ್ನು ಸಮರಸ ಗೊಳಿಸಿದಾಗ ಕಾಮವೂ ಪ್ರೇಮವಾಗಿಬಿಡುವುದು ! ನಮ್ಮನ್ನು ಬಲವಂತವಾಗಿ ಕೂರಿಸಿ ಮಲ್ಲಪ ಪುಸ್ತಕ ಬರೆಸುತ್ತಿರುವರು ! "

"ಸ್ವಾಮಿ, ತಮ್ಮ ಭುವನೈಕ ರಾಮಾಭ್ಯುದಯವನ್ನೂ ಪಂಪಕವಿಯ ವಿಕ್ರಮಾರ್ಜುನ ವಿಜಯವನ್ನೂ ಓದಿಕೊಂಡೇ ನಾನು ರಣಗಲಿಯಾದುದು ! ಈ ಎರಡು ಕೃತಿಗಳನ್ನೂ ಓದಿದಾಗ ಒಂದು ಕಡೆ ರಕ್ತ ಕುದಿದರೆ ಇನ್ನೊಂದು ಕಡೆ ಲೋಕಕಂಟಕವಾದ ಯುದ್ಧಗಳನ್ನು ಆದಷ್ಟೂ ತೊರೆಯುವುದೇ ಶ್ರೇಯಸ್ಕರವೆಂಬ ಎಚ್ಚರಿಕೆಯೂ ನಮಗುಂಟಾಗುವುದು. ಸ್ವಾಮಿ ತಾವು ಈಗ ಬರೆಯುತ್ತಿರುವ ಮಹಾಮೇರುಕೃತಿ ಯಾವುದು?"

"ಜಿನಚಂದ್ರರು ಶಾಂತಿಪುರಾಣವನ್ನು ಕೇಳುವ ಹಂಬಲದಲ್ಲೇ ಪರಂಧಾಮವನ್ನೈದಿದರು. ಪರೋಕ್ಷವಾಗಿ ಅವರಿಗೆ ಅರ್ಪಿಸಲು ಈ ಕೃತಿಯನ್ನು ಮಲ್ಲಪ ಹಾಗು ಪುನ್ನಮಯ್ಯ ಬರೆಸುತ್ತಿರುವರು. "

"ಗ್ರಂಥರಚನೆ ಪೂರೈಸುತ್ತ ಬಂದಿದೆಯೇ ಸ್ವಾಮಿ" ?

"ಇನ್ನೇನು ಮುಗಿಯುತ್ತ ಬಂದಿದೆ. ಅತ್ತಿಮಬ್ಬೆಯ ಮದುವೆಯಲ್ಲಿ ಇದರ ಪ್ರಕಾಶನ ಕಾರ್ಯ ನೆರವೇರುವುದು. ಪಂಚಕಲ್ಯಾಣ ಮೂರ್ತಿಯಾದ ಶಾಂತಿಜಿನನನ್ನು ಮಲ್ಲಪ ತನ್ನ ಮಗಳ ಕಲ್ಯಾಣದಲ್ಲಿ ಪ್ರಕಾಶಪಡಿಸುವರು !" ಎಂದು ಪೊನ್ನಕವಿ ಮುಗುಳ್ನಕ್ಕನು.

"ಅತ್ತಿಮಬ್ಬೆಯ ಮದುವೆ ಗೊತ್ತಾಯಿತೆ ಮಲ್ಲಪ? ಗಂಡು ಯಾವುದು?" ಎಂದು ಚಾಮುಂಡರಾಯ ಸೋಜಿಗದಿಂದ ಬೆಸಗೊಂಡನು.

"ಇನ್ನೂ ಗಂಡನ್ನೂ ನಿಷ್ಕರ್ಷೆ ಮಾಡಬೇಕಾಗಿದೆ. ದಲ್ಲಪ ಅದಕ್ಕಾಗಿಯೇ ಬಂದಿರುವರು. ಇವರ ಪುತ್ರ ನಾಗದೇವ ನಮಗೆ ಹೊಂದುವಂಥ ವರವೇ" ಎಂದು ಮಲ್ಲಪ ನುಡಿದಾಗ ದಲ್ಲಪನ ಮುಖ ಊರಗಲವಾಯಿತು.

“ತಮ್ಮ ಇನ್ನೊಬ್ಬ ಪುತ್ರಿಯ ಮದುವೆಯನ್ನೂ ಮಾಡಿಬಿಡಿ. ಹೇಗಿದ್ದರೂ ಇವು ಅವಳಿ ಮಕ್ಕಳು. ಜೊತೆಯಾಗಿಯೇ ಹುಟ್ಟಿದವರು ಜೊತೆಯಾಗೇ ಮದುವೆಯಾಗಲಿ” ಎಂದು ಚಾಮುಂಡರಾಯ ಗಂಭಿರವಾಗಿ ತಿಳಿಸಿದನು.

“ಸರಿಯಾದ ಗಂಡೊದಗಿದರೆ ಅದೂ ಆಗಬಹುದು” ಎಂದು ಪಂಪ ಕವಿ ಅಡೇ ಬಿಟ್ಟನು.

“ತಮ್ಮ ಮಕ್ಕಳಿಗೆ ಗಂಡುಗಲ ಬರವೇ, ತಡಮಾಡಿದರೆ ನಮಗೆ ಹೆಣ್ಣು ಸಿಗಲಾರದೆಂದೇ ನಮ್ಮ ತಾಯಿ ನನ್ನನ್ನು ಇಲ್ಲಿಗೆ ಓಡಿಸಿದರು. ಹಿಂದೊಮ್ಮೆ ನಮ್ಮ ಮಾತಾಪಿತರು ಇಲ್ಲಿಗೆ ಬಂದಾಗ್ಗೆ ಅಬ್ಬಕಬ್ಬೆಯವರೇ ಮಾಡೆತ್ತಿ ನಮ್ಮ ಸಂಬಂಧ ಮಾಡಬೇಕೆಂದು ಕೇಳಿಕೊಂಡಿದ್ದರಂತೆ. ಈಗಿರುವ ಎರಡು ಮಕ್ಕಳಲ್ಲಿ ತಾವು ಯಾವುದನ್ನು ಕೊಟ್ಟರೂ ನಮಗೆ ಸಂತೋಷವೆ. ಅತ್ತಿಮಬ್ಬೆ ದಲ್ಲಪನ ಸೊಸೆಯಾಗಲಿ, ಗುಂಡು ಮಬ್ಬೆ ನನ್ನ ಸೊಸೆಯಾಗಲಿ. ನಮ್ಮ ಮಾತಾಪಿತರಿಬ್ಬರಿಗೂ ವಯಸ್ಸಾಯಿತು. ಮೊಮ್ಮಗನ ಮದುವೆ ನೋಡಬೇಡವೇ ಎಂದು ಅವಸರ ಪಡುತ್ತಿರುವರು. ತಾವೆಲ್ಲ ಮೊಮ್ಮಗನ ಮದುವೆ ನೋಡಬೇಡವೇ ಎಂದು ಅವಸರ ಪಡುತ್ತಿರುವರು. ತಾವೆಲ್ಲ ಹಿರಿಯರು ಒಪ್ಪಿಕೊಂಡರೆ ಎರಡು ಮದುವೆಯನ್ನೂ ಬೇಕಿದ್ದರೆ ಶ್ರವಣಬೆಳಗೊಳದಲ್ಲೇ ಮಾಡಿಬಿಡೋಣ. ಪುಣ್ಯಕ್ಷೇತ್ರದಲ್ಲಿ ಶುಭಕಾರ್ಯ ನಡೆದು ಹೋಗಲಿ, ಏರ್ಪಾಟೆಲ್ಲ ನನಗಿರಲಿ,” ಎಂದು ಚಾಮುಂಡರಾಯ ಭಾವಾವೇಶದಿಂದ ಮಾತಾಡಿದನು. ಎಲ್ಲರೂ ಅವಾಕ್ಕಾದರು. ಅನಿರೀಕ್ಷಿತವಾಗಿ ಎರಡೂ ಗಂಡುಗಳು ಹೆಣ್ಣಿನ ಪಾದಾರವಿಂದಕ್ಕೆ ಬಂದಿರುವುವು! ಮಲ್ಲಪನಿಗೆ ಏನು ಹೇಳಬೇಕೋ ತೋಚಲಿಲ್ಲ. ದಲ್ಲಪನಿಗೆ ನಾಗಮಯ್ಯ ಮಾತು ಕೊಟ್ಟಿರುವನು. ಕಾಳಲಾದೇವಿಗೆ ಅಬ್ಬಕಬ್ಬೆ ಮಾತು ಕೊಟ್ಟಿರುವಳು. ಮರುಮಾತಡದಂತೆ ಮಾಡಿರುವರು. ಎರಡೂ ಸಂಬಂಧಗಳು ಹೇಳಿ ಮಾಡಿಅಸಿದಂತಿವೆ. ಚಾಮುಂಡರಾಯ ಗಂಗರಾಜ್ಯದ ಜೀವನಾಡಿ ! ರಾಷ್ಟ್ರಕೂಟ ಸಾಮ್ರಾಜ್ಯದ ಅನಧಿಕೃತ ಮಹಾಮಂತ್ರಿ ! ಇನ್ನೊಂದು ಕಡೆ ದಲ್ಲಪ ಚಾಲುಕ್ಯರಾಜ್ಯದ ಆಧಾರ ಸ್ತಂಭ ! ನಾಗಮಯ್ಯನ ಪ್ರಾಣಸ್ನೇಹಿತ. ಇಂಥ ಬೀಗರು ಹೆಣ್ಣಿಗಾಗಿ ಬಾತು ತನ್ನಲ್ಲಿ ಬಂದಿರುವಾಗ ಮಲ್ಲಪ ಮೂಕನಾಗದಿರುತ್ತಾನೆಯೇ? ಈ ಹೆಮ್ಮಕ್ಕಳ ಮದುವೆಯಿಂದ ಕರ್ಣಾಟಕದ ರಾಜಕೀಯವೆಲ್ಲ ತನ್ನ ಕರಗತವಾಗದಿರದೆಂದು ಮಲ್ಲಪ ಒಳಗೊಳಗೇ ಹಿಗ್ಗಿದನು. ಮನೆಯಲ್ಲಿ ಒಂದು ಮಾತು ವಿಚಾರಿಸಿ ತಿಳಿಸುವುದಾಗಿ ಅವನು ಹೇಳಿದಾಗ

“ಮಲ್ಲಪ ಹೂಗುಟ್ಟಿಬಿಡು. ಎಲ್ಲ ಪೂರ್ವಭಾವಿಯಾಗಿ ಸಿದ್ಧವಾಗಿ ಬಿಟ್ಟಿದೆ ! ನೀನೂ ನಿನ್ನ ಮಕ್ಕಳು ನಿಜವಾಗು ಭಾಗ್ಯವಂತರು. ಅತ್ತಿಮಬ್ಬೆ ದಲ್ಲಪನ ಮನೆಗೆ ಹೋಗಲಿ. ಗುಂಡುಮಬ್ಬೆ ಚಾಮುಂಡರಾಯನ ಮನೆಗೆ ಹೋಗಲಿ. ಕರ್ಣಾಟಕವೆಲ್ಲ ನಿನ್ನದೇ ಆಯಿತು ! ನಿನ್ನ ಮಕ್ಕಳು ಮನಸ್ಸು ಮಾಡಿದರೆ ಇನ್ನು ಮುಂದೆ ಕನ್ನಡನಾಡಿನಲ್ಲಿ ಯುದ್ಧಗಳೇ ಆಗದಂತೆ ಮಾಡಿಬಿಡಬಹುದು. ಗಂಗರೂ ರಾಷ್ಟ್ರಕೂಟರೂ ಅಚ್ಚ ಹದಿನಾರಣೆ ಜೈನರು ! ಅಲ್ಲಿನ ರಾಜರು ಮೂಲ ವಿಗ್ರಹಗಳಂತೆ ಚಾಮುಂಡರಾಯನೇ ಎರಡು ಸಾಮ್ರಾಜ್ಯದ ಉತ್ಸವಮೂರ್ತಿ ! ದಲ್ಲಪ ಹಾಗು ನೀವು ಚಾಲುಕ್ಯ ಶಾಖೋಪಶಾಖೆಗಳಿಗೆ ರಕ್ಷಾಮಣಿಗಳು ! ಎಲ್ಲ ಶಾಖೆಗಳನ್ನೂ ಅಹಿಂಸಾ ಸೂತ್ರದಲ್ಲಿ ಬಂಧಿಸಿಬಿಡೋಣ !” ಎಂದು ಪಂಪಕವಿ ಉತ್ಸಾಹಗೊಂಡು ನುಡಿದನು.

“ಪಂಪಕವಿಗೆ ಪ್ರಾಯ ಬಂದಂತಾಯಿತು !” ಎಂದು ಪೊನ್ನ ನಗೆಯಾಡಿದನು.

“ಪ್ರಾಯವೇ ಸ್ವಾಮಿ ! ಈ ವಿವಾಹಗಳಿಂದ ನನಗಂತು ಕಣ್ಮರೆಯಾದ ಮಹಾ ಪ್ರಭುವಿನ ಪುನರಾವತಾರವಾದಷ್ಟು ಆನಂದವಾಗದಿರದು. ಯುದ್ಧಗಳಿಂದ ಶಾಂತು ಸುಭಿಕ್ಷ ನೀರುಪಲಾಗಿ ಹೋಯಿತು ! ಅರಿಕೇಸರಿ ಮಹಾಪ್ರಭು ಸಾಯುವಾಗ ಒಂದು ಮಾತು ಹೇಳಿದರು. “ಪಂಪ. ಏನಾದರೂ ಮಾಡಿ ಕರ್ಣಾಟಕವನ್ನು ರಕ್ತಪಾತದಿಂದ ತಪ್ಪಿಸಬೇಕಲ್ಲ. ಕರ್ಣಾಟಕದ ನದಿಗಳೆಲ್ಲ ಅಪೂರ್ವ ಜೀವರತ್ನಗಳ ರಕ್ತಪ್ರವಾಹವಾಗಿ ಹೋಗುತ್ತಿರುವುದನ್ನು ತಪ್ಪಿಸುವುದಕ್ಕಾಗುವುದಿಲ್ಲವೆ? ರಾಜಮಹಾರಾಜರ ಪ್ರತಿಷ್ಠೆಗಾಗಿ ನಾಡೆಲ್ಲ ಬೇಯಬೇಕೆ ?” ಎಂದು ಮಮ್ಮಲ ಮರುಗಿ ಕಣ್‌ಮುಚ್ಚಿದರು. ಅವರ ಕಡೆಯಾಸೆಯನ್ನು ಈ ವಿವಾಹಗಳಿಂದ ನೆರವೇರಿಸಿ ನಾನು ಕೃತಕೃತ್ಯನಾಗುವೆನು” ಎಂದು ಪಂಪಕವಿ ಸ್ಫೂರ್ತಿದಾಯಕವಾಗಿ ಒಂದು ಭಾಷಣವನ್ನೇ ಬಿಗಿದನು.

“ಮನೆಯಲ್ಲೂ ಒಂದು ಮಾತು ಕೇಳಿಬಿಡಿ. ಅದಕ್ಕೇನಂತೆ” ಎಂದು ಚಾಮುಂಡರಾಯ ಮಲ್ಲಪನ ಹೊಯ್ದಾಟವನ್ನು ನಿವಾರಿಸಿದನು.

ಮಲ್ಲಪ ತನ್ನ ಹೆಂಡತಿ ಅಬ್ಬಕಬ್ಬೆಯನ್ನು ಕಂಡನು. ಅಂದು ಆಕೆಯ ಮುಖ ಜೀವನ್ಮುಕ್ತಳಾದವಳಂತೆ ಸಂತೃಪ್ತಿ ಸಮಾಧಾನ ತುಂಬಿ ತುಳುಕುತ್ತಿತ್ತು. ತನ್ನ ಬಾಳಿನ ಎಲ್ಲ ಸಮಸ್ಯೆಗಳನ್ನು ನಿವಾರಿಸಿದವಳಂತೆ ಆಕೆ ಹಿಗ್ಗಿ ಹೋಗಿದ್ದಳು. ಗಂಡ ಬಂದುದೂ ಕಾಣಲಿಲ್ಲ.

“ಅಬ್ಬಕಬ್ಬೆ ಏನು ಬಹಳ ಆನಂದದಲ್ಲಿರುವೆ?” ಎಂದು ಮಲ್ಲಪ ಹೆಸರು ಹಿಡಿದು ಕೂಗಿದಾಗಲೆ ಆಕೆಗೆ ಎಚ್ಚರ. ಸಮಾಧಿಯಿಂದ ಬಹಿರ್ಮುಖಳಾದವಳಂತೆ ಬೆಚ್ಚಿದಳು.

“ಓಹೋ ನೀವೋ ?”

“ನಾನಲ್ಲದೆ ಇನ್ನಾರು ಬಂದಾರು !”

“ಅಲ್ಲ ಯಾವುದೋ ಜ್ಞಾನದಲ್ಲಿದ್ದೆ. ”

“ನಿನ್ನ ಮುಖ ನೋಡಿದರೆ ತಿಳಿಯುತ್ತಲ್ಲ.”

“ಮುಖದಲ್ಲೇನಾದರೂ ಮಸಿ ನಿಂತಿದಿಯೆ?” ಎಂದು ಅಬ್ಬಕಬ್ಬೆ ಸೆರಗಿನಿಂದ ಒರಸಿಕೊಳ್ಳುತ್ತಾ ಕೇಳಿದಳು.

“ಮಸಿಯಿಲ್ಲ, ಸುಮ್ಮನೆ ಏಕೆ ಒರೆಸಿಕೊಳ್ಳುತ್ತಿ ?”

“ಇದ್ದಕ್ಕಿಂದ್ದಂತೆ ಯಾರು ಯಾರೋ ದೊಡ್ಡ ಮನುಷ್ಯರು ಬಂದುಬಿಟ್ಟರು. ಅವಸರವಸರವಾಗಿ ಊಟದ ಏರ್ಪಾಟು ಸಾಗಿತು. ಈ ಅವಾಂತರದಲ್ಲಿ ಕೈಗೋ ಮುಖಕ್ಕೋ ಮಸಿಯಾಗಿದ್ದರೂ ಹೆಚ್ಚಲ್ಲ. ”

“ಇವರೆಲ್ಲ ಬಂದುದು ಏತಕ್ಕೆ ಎಂದುಕೊಂಡೆ?”

“ನನಗೇನು ಗೊತ್ತು?”

“ಸುಳ್ಳು ಹೇಳುತ್ತಿರುವೆ.”

“ಛೇ ! ನಿಮ್ಮೊಡನೆ ಸುಳ್ಳೆ.”

“ಕಾಳಲಾದೇವಿಗೆ ನೀನು ಮಾತುಕೊಟ್ಟಿದ್ದೀಯಂತೆ?”

“ಮಾತು ! ಏನು ?”

“ರಾಯರ ಮಗನಿಗೆ ಹೆಣ್ಣು ಕೊಡುವುದಾಗಿ ತಿಳಿಸಿದ್ದೆಯಂತೆ. ಅದಕ್ಕಾಗೇ ಅವರು ಬಂದಿರುವರು. ನನಗೂ ತಿಳಿಸದೆ ಹೆಂಗಸರು ಹೆಂಗಸರೇ ಕಾರುಬಾರು ಮಾಡುವುದೇ? ”

“ಏನೋ ಹಾಗಂದಿದ್ದೆ. ಈಗ ತಮಗಿಷ್ಟವಿಲ್ಲದಿದ್ದರೆ ಏನಾದರೂ ಒಂದು ಹೇಳಿ ಸಾಗುಹಾಕಿಬಿಡಿ.”

“ಅಲ್ಲ ಮನೆಗೆ ಅಹ್ವಾನಿಸುವವಳು ನೀನು. ಸಾಗುಹಾಕಲು ನಾನೇ? ಚೆನ್ನಾಯಿತು !”

“ರಾಜ ಮಹಾರಾಜರ ಸಂಬಂಧ ಬೆಳೆಸಲು ನೀವು ಹಾತೊರೆಯುತ್ತಿರುವಿರಿ ! ನನಗೇನೊ ರಾಯರ ಮನೆಯೇ ಸಾಕೆಂದು ತೋರುವುದು.”

“ಅಂತು ನಿನಗೆ ಇಷ್ಟವಿದ್ದಂತಾಯಿತು.”

“ಇಷ್ಟವಿಲ್ಲದಿದ್ದರೆ ಆ ರೀತಿ ಮಾತುಕೊಡುತ್ತಿದ್ದೆನೆ?”

“ಈಗ ನಾನು ಒಪ್ಪದೇ ಹೋದರೆ. . . .?”

“ನೀವೇ ನನ್ನ ಮಾರ್ರ್‍ಯಾದೆ ಕಳೆಯಬೇಕೆಂದು ಹಟತೊಟ್ಟಾಗ ಅಳುತ್ತ ಅನುಭವಿಸ ಬೇಕು. ನನ್ನ ಮಗಳ ಮದುವೆಯ ವಿಚಾರದಲ್ಲಿ ನನಗೆ ಸ್ವಲ್ಪವೂ ಸ್ವಾತಂತ್ರ್ಯವಿಲ್ಲವೆ?” ಎಂದು ಅಬ್ಬಕಬ್ಬೆ ಅಳುಮೋರೆ ಮಾಡಿಕೊಂಡಳು.

“ನನಗು ಮಗಳಲ್ಲವೇನೆ ?”

“ಅಲ್ಲ ಅಂದವರಾರು?”

“ಹಾಗಿದ್ದರೆ ನನಗೊಂದು ಮಾತು ತಿಳಿಸಬಾರದಾಗಿತ್ತೆ?”

“ನಾನೇನು ಕೆಟ್ಟ ಕಾರ್ಯವನ್ನು ಮಾಡಿಲ್ಲವಲ್ಲ. ಒಳ್ಳೆಯದನ್ನು ಮಾಡಲು ಯಾರನ್ನೇನು ಕೇಳುವುದು? ನಾನು ಮಾತುಕೊಟ್ಟದ್ದು ಕಾಳಲದೇವಿಗೇ ಹೊರತು ರಾಯರಿಗಲ್ಲವಲ್ಲ. ಏನೋ ಹೆಂಗಸರು ಹೆಂಗಸರು ಕಲೆತಾಗ ಸ್ಫೂರ್ತಿಬಂದಿತು. ಅಂದುಬಿಟ್ಟೆ. ಹಾಲಲ್ಲಾದರೂ ಹಾಕಿ ನೀರಲ್ಲಾದರೂ ಹಾಕಿ ! ಇನ್ನೊಂದು ಹೆಣ್ಣಿದೆಯಲ್ಲ ಅದನ್ನು ನೀವು ಯಾರಿಗಾದರೂ ಕೊಡಿ ನಾನು ಬೇಡವೆನ್ನುವುದಿಲ್ಲ” ಎಂದು ಅಬ್ಬಕಬ್ಬೆ ಸಪ್ಪೆಮೋರೆ ಹಾಕಿದಳು.

“ದಲ್ಲಪ ಬಂದಿರುವುದು ಏತಕ್ಕೆ ಗೊತ್ತೇ ?”

“ನನಗೆ ಹೇಗೆ ಗೊತ್ತಾಗಬೇಕು ಮಹಾರಾಯರೆ?”

“ನಮ್ಮತಂದೆ, ದಲ್ಲಪನ ಮಗನಿಗೆ ಹೆಣ್ಣು ಕೊಡುವುದಾಗಿ ಮಾತುಕೊಟ್ಟಿದ್ದರಂತೆ. ಈಗ ಹೆಣ್ಣು ಕೇಳಲು ದಲ್ಲಪ ಬಂದಿರುವರು. ಅತ್ತ ಅಜ್ಜನ ಮಾತು, ಇತ್ತ ತಾಯಿಯಿ ಮಾತು ಇನ್ನು

ಹೆಣ್ಣಿನ ತಂದೆಯನ್ನು ಕೇಳುವವರೇ ಇಲ್ಲವಲ್ಲ !" ಎಂದು ಮಲ್ಲಪ ಪ್ರಮಾದವಾದವನಂತೆ ನಟಿಸಿದನು.

"ಪಾಪ ತಮ್ಮ ಮಾವನವರೂ ಒಳ್ಳೆಯ ಗಂಡನ್ನೇ ಹೊಂಚಿ ಹೋಗಿರುವರು! ತಾನು ಸತ್ತ ನಂತರ ಮಕ್ಕಳಿಗೆ ಪರದಾಟವಾಗಬಾರದೆಂದು ಯೋಚಿಸಿರುವರಲ್ಲ!" ಎಂದು ಮಾವನ ಕಾರ್ಯವನ್ನು ಮೆಚ್ಚಿ ಕೊಂಡಾಡಿದಳು.

"ಈಗ ಬಂದಿರುವ ಎರಡು ಗಂಡುಗಳೂ ನಿನಗೆ ಒಪ್ಪಿಗೆಯಾದಂತೆ ತಾನೆ?"

"ನಿಮ್ಮ ಅಭಿಪ್ರಾಯವನ್ನು ಮೊದಲು ತಿಳಿಸಿ ಅಂದ್ರೆ."

"ನನ್ನ ಅಭಿಪ್ರಾಯ ಯಾರಿಗೆ ಬೇಕು? ಒಂದು ಕಡೆ ದಲ್ಲಪ ಬಂದು ಮಂಡಿಗೆ ಕುಳಿತಿರುವರು. ಇನ್ನೊಂದು ಕಡೆ ರಾಯರು ಬಂದು ಬಲವಂತ ಮಾಡುತ್ತಿರುವರು. ಇವರಿಬ್ಬರನ್ನೂ ಬರಿಗೈಯಲ್ಲಿ ಕಳಿಸಿ ನಾವು ಉಳಿಯಬಹುದೆ?"

"ಹೆದರಿ ಹೆಣ್ಣುಕೊಡುವ ಪ್ರಮೇಯವೇನಿಲ್ಲ."

"ಹೋಗಲಿ ಗಂಡುಗಳು ಅವಾಗೇ ಬಂದಿರುವುವು. ಹುಡುಕುವ ಕಷ್ಟವೇ ತಪ್ಪಿತು. ಅತ್ತಿಮಬ್ಬೆ ಮತ್ತು ಗುಂಡುಮಬ್ಬೆ ಇವರ ಒಪ್ಪಿಗೆ ಪಡೆದುಬಿಡು. ಮದುವೆಯನ್ನು ಶ್ರವಣಬೆಳಗೊಳದಲ್ಲೇ ಮಾಡಿಬಿಡೋಣ."

"ನಿಜವೇ? ಕುಶಾಲಲ್ಲಿ ತಾನೇ?"

"ಖಂಡಿತವಾಗು ಶ್ರವಣಬೆಳಗೊಳದಲ್ಲೇ ಮಾಡಿಬಿಡೋಣ."

"ನಮ್ಮ ಮಕ್ಕಳ ಪುಣ್ಯವೇ ಪುಣ್ಯ. ಚಿನ್ನದಂಥ ಗಂಡುಗಳು ! ಪುಣ್ಯಕ್ಷೇತ್ರದಲ್ಲಿ ಪಾಣಿಗ್ರಹಣ !" ಎಂದು ಅಬ್ಬಕಬ್ಬೆ ಚಿಗರೆಯಂತೆ ನೆಗೆಯುತ್ತ ಒಳಗೆ ಹೋಗಿ ಮಕ್ಕಳನ್ನು ಕರೆದಳು. ಒಂದೆರಡು ಬಾರಿ ಕೂಗಿದಮೇಲೆ ಅತ್ತಿಮಬ್ಬೆ ಮತ್ತು ಗುಂಡು ಮಬ್ಬೆಯರು ಮಹಡಿಯಿಂದ ಇಳಿದು ಬಂದರು. ದೇವಲೋಕದಿಂದ ಸುರಕನ್ಯೆಯರು ಇಳಿದುಬರುವಂತೆ ಬೆಡಗಿನ ಈ ನಾಟ್ಯಕನ್ನೆಯರು ಕುಡಿಮಿಂಚಾಡುವಂತೆ ಕಡೆಗಣ್ಣ ಪ್ರಭೆ ಅತ್ತಿತ್ತ ತುಳುಕಿ, ವೈಯಾರದಿಂದ ತಾಯಿಯ ಬಳಿ ಬಂದರು.

"ಏನು ಮಾಡುತ್ತಾ ಇದ್ದಿರಕ್ಕ" ಎಂದು ಅಬ್ಬಕಬ್ಬೆ ವಾತ್ಸಲ್ಯದಿಂದ ಬೆಸಗೊಂಡು ಆ ಹೆಮ್ಮಕ್ಕಳ ಹಣೆಯಲ್ಲಿ ಚೆಲ್ಲಿ ಚೆಲ್ಲಾಟವಾಡುತ್ತಿದ್ದ ಮುಂಗುರುಳನ್ನು ಚಂದಿರನ ಕಲೆಯಳಸುವಂತೆ ನೇವರಿಸಿದಳು.

"ಇಷ್ಟು ಹೊತ್ತು ರಾಯರು ನಿಮಗಾಗಿ ಕಾದರು" ಎಂದಾಗ ಮಕ್ಕಳಿಬ್ಬರೂ ಗಾಬರಿಗೊಂಡರು.

"ಚಾಮುಂಡರಾಯರೇ? ನಮಗಾಗಿ? ಏಕಮ್ಮ?" ಎಂದು ಅತ್ತಿಮಬ್ಬೆ ಚಕಿತಳಾಗಿ ಕೇಳಿದಳು.

"ನಮ್ಮ ರಾಯರು ಕಣೆ."

"ಅಪ್ಪಾಜಿಯೇನಮ್ಮ ?" ಗುಂಡುಮಬ್ಬೆ ಹುಸಿನಗುತ್ತ ಬೆಸಗೊಂಡಳು.

"ಅಹುದು ಅಪ್ಪಾಜಿನೇ."

"ಎಂದಿನಿಂದ ಅವರು ರಾಯರಾದರಮ್ಮ !" ಎಂದು ಅತ್ತಿಮಬ್ಬೆ ನಗೆಯಾಡಿದಳು. ಅಬ್ಬಕಬ್ಬೆಗೂ ನಗು ಬಾರದಿರಲಿಲ್ಲ.

"ಚಾಮುಂಡಯರೂ ನಿಮಗಾಗಿ ಕಾದಿರುವರು. . . ."

ಎಂದು ಅಬ್ಬಕಬ್ಬೆ ಧ್ವನಿಪೂರ್ವಕ ನುಡಿದಳು.

"ನಮಗಾಗೇ? ಅವರು ಊರಿಗೆ ಹೊರಟಿರುವರೇನಮ್ಮ?"

ಅತ್ತಿಮಬ್ಬೆ ಆಶ್ಚರ್ಯದಿಂದ ಕೇಳಿದಳು.

"ಬಂದುದು ಈ ದಿನವೇ ಹೊರಟದ್ದೂ ಈ ದಿನವೇ! ಒಂದೆರಡು ದಿನ ಇದ್ದುಬಿಡಿ ಎಂದು ಅಪ್ಪಾಜಿ ಬಲವಂತಮಾಡಲಿಲ್ಲವೇನಮ್ಮ?"

"ಮಾಡದೇ ಇರುತ್ತಾರೆಯೆ? ಅದಿರಲಿ ಅವರು ಏಕೆ ಬಂದಿರುವರೆಂಬುದಾದರೂ ನಿಮಗೆ ಗೊತ್ತೆ?" ಎಂದು ಅಬ್ಬಕಬ್ಬೆ ವ್ಯಂಗ್ಯವಾಗಿ ನಕ್ಕಳು.

"ಹೋಗಮ್ಮ ಸಾಕು. ನಮ್ಮನ್ನು ಎಲ್ಲೂ ಹೋಗದಂತೆ, ಯಾರೊಡನೆಯೂ ಮಾತಾಡದಂತೆ ನಿರ್ಬಂಧ ಮಾಡಿರುವಿರಿ. ತಾತ ಇದ್ದಿದ್ದರೆ ನಾನೇ ಹೋಗಿ ಚಾಮುಂಡರಾಯರನ್ನು ಮಾತಾಡಿಸೇ ಬಿಡುತ್ತಿದ್ದೆ" ಎಂದು ಅತ್ತಿಮಬ್ಬೆ ಮುನಿಸಿಕೊಂಡು ಅಕ್ಷೇಪಣೆ ಮಾಡಿದಳು.

“ಚಾಮುಂಡರಾಯರನ್ನೇನು ಅವರ ಅಪ್ಪನನ್ನೂ ಮಾತಾಡಿಸಿ ಏಕೆ ಬಂದಿರುವಿರಿ, ಎಲ್ಲಿಂದ ಬಂದಿರಿ ಎಂದು ಅವರ ಪೂರ್ವೋತ್ತರವನ್ನೆಲ್ಲ ಬಯಲಿಗೆ ಎಳೆಯದೇ ಬಿಡುತ್ತಿದ್ದೆನೆ ! ತಾತ ಸತ್ತಾಗಲೇ ನಮ್ಮ ಸ್ವಾತಂತ್ರ್ಯವನ್ನೂ ಕಳೆದ್ಕೊಂಡೆವು!” ಎಂದು ಗುಂಡುಮಬ್ಬೆ ಭಾರಿ ನಷ್ಟವಾದವಳಂತೆ ತಳಮಳಿಸಿದಳು.

“ಚಾಮುಂಡರಾಯರೆಂದರೆ ಏನೆಂದುಕೊಂಡಿರಿ? ಗಂಗ ಸಾಮ್ರಾಜ್ಯದ ಸೂತ್ರಧಾರ !”

“ಚಕ್ರೇಶನೆ ಆಗಿರಲಿ ನಮಗೇನಂತೆ. ನವೇನು ಅವರೊಡನೆ ಕಾದಾಡಬೇಕೆ? ಲೋಕಾಭೀರಾಮವಾಗಿ ಒಂದೆರಡು ಮಾತಾಡಿದರೆ ಏನಾದೀತು?” ಎಂದು ಅತ್ತಿಮಬ್ಬೆ ಗತ್ತಾಗಿ ನುಡಿದಳು.

“ಯುದ್ಧಕ್ಕೆ ಕಳಿಸಿದರೂ ಹೋದೀರೋ ಏನೋ. ನೀವಿಬ್ಬರೂ ಗಯ್ಯಾಳಿಗಳು” ಎಂದು ಅಬ್ಬಕಬ್ಬೆ ತುಟಿಕಚ್ಚಿಕೊಂಡಳು.

“ಗಂಡಸರೆಲ್ಲಾ ಸ್ವಾರ್ಥಪರರು ! ನಮ್ಮ ಕೈಗೆ ವೀಣೆಕೊಟ್ಟು ಕುಕ್ಕರು ಬಡಿಯುವರು. ಬಿಲ್ಲುಬಾಣ ಹಿಡಿದು ನಿಂತೆವೆಂದರೆ ಗಂಡಸರಿಗೆ ಹೊಯ್‌ಕೈಯಾಗಿ ಹೋರಾಡೇ ಹೋರಾಡುವೆವು. ಸತ್ತರೆ ಸ್ವರ್ಗ, ಇದ್ದರೆ ಕೀರ್ತಿ !” ಎಂದ್ು ಗುಂಡುಮಬ್ಬೆ ವೀರಮಹಿಳೆಯಂತೆ ನುಡಿದಳು.

“ನಿಮ್ಮಜ್ಜ ಉಬ್ಬಿಸಿ ನಿಮ್ಮನ್ನು ಇಲ್ಲಿಗೆ ತಂದರು !”

“ಇನ್ನು ಅಜ್ಜ ಇದ್ದಿದ್ದರೆ ಎಲ್ಲಿಗೆ ಕೊಂಡು ಹೋಗುತ್ತಿದ್ದರೋ !” ಎಂದು ಅತ್ತಿಮಬ್ಬೆ ಕಟಕಿಯಾಡಿದಳು.

“ಹೋಗಲಿ ಮುಖ್ಯ ಪ್ರಶ್ನೆಗೆ ಬರೋಣ” ಎಂದು ತಾಯಿ ಅರ್ಧಕ್ಕೆ ಮಾತು ನಿಲ್ಲಿಸಿದಳು.

“ನಮ್ಮದೇನೂ ಅಭ್ಯಂತರವಿಲ್ಲವಲ್ಲ !” ಎಂದು ಗುಂಡುಮಬ್ಬೆ ರಾಗ ಎಳೆದಳು.

“ನೋಡಿ. ದಲ್ಲಪ ಅವರ ಮಗ ನಾಗದೇವನಿಗೆ ಹೆಣ್ಣು ಕೇಳಲು ಬಂದಿರುವರು. . .” ಎಂದು ಅಬ್ಬಕಬ್ಬೆ ನುಡಿಯುತ್ತಿದ್ದಂತೆಯೇ ಅತ್ತಿಮಬ್ಬೆ ಮಧ್ಯೆ ಬಾಯಿಹಾಕಿ,

“ರಾಯರು ಅವರ ಮಗನಿಗೆ ಹೆಣ್ಣು ಕೇಳಲು ಬಂದಿರುವರು. . . . ” ಎಂದು ನಗೆಯಾಡಿದಳು.

“ನೀವಿಬ್ಬರೂ ತಾಟಗಿತ್ತಿಯರು. ಮುಂಚಿತವಾಗಿಯೇ ಊಹಿಸಿರುವಿರಿ !”ಎಂದು ಅಬ್ಬಕಬ್ಬೆ ಅಚ್ಚರಿಗೊಂಡಳು.

“ಎಷ್ಟಾದರೂ ನಿನ್ನ ಮಕ್ಕಳಲ್ಲವೇನಮ್ಮ !” ಎಂದು ಗುಂಡುಮಬ್ಬೆ ನಗೆಯಾಡಿದಳು. ಅಬ್ಬಕಬ್ಬೆಗೆ ಮಕ್ಕಳ ಮಾತು ಕೇಳಿ ಹೆಮ್ಮೆಯುಂಟಾಯಿತು.

“ಅತ್ತಿಮಬ್ಬೆಯನ್ನು ನಾಗದೇವನಿಗೂ, ಗುಂಡುಮಬ್ಬೆಯನ್ನು ಜಿನ್ನಣ್ಣನಿಗೂ ಕೊಡಬೇಕೆಂದು ಯೋಚಿಸಿರುವೆವು” ಎಂದು ಅಬ್ಬಕಬ್ಬೆ ನುಡಿದು ಮಕ್ಕಳಿಬ್ಬರ ಮುಖದಲ್ಲೇಳುವ ಭಾವತರಂಗವನ್ನು ಈಕ್ಷಿಸುತ್ತಾ ಕುಳಿತಳು.

“ಅಮ್ಮ ಇವರಿಬ್ಬರಲ್ಲಿ ನನ್ನನ್ನು ಯಾರಿಗೆ ಕೊಟ್ಟರೂ ಸಂತೋಷವೆ” ಎಂದು ಅತ್ತಿಮಬ್ಬೆ ತನ್ನ ಒಪ್ಪಿಗೆಯನ್ನು ಸೂಚಿಸಿದಳು. ತಾಯಿಗೆ ಆಕಾಶವೆ ಕೈಗೆ ಎಟುಕಿದಂತಾಗಿ ಗುಂಡುಮಬ್ಬೆಯತ್ತ ತಿರುಗಿ.

“ಮಗು, ನಿನ್ನ ಅಭಿಪ್ರಾಯವೇನಮ್ಮ ?” ಎಂದು ವಾತ್ಸಲ್ಯವನ್ನು ಕರೆಯುತ್ತಾ ಬೆಳೆಸಗೊಂಡಳು.

“ನನ್ನ ಅಭಿಪ್ರಾಯಕ್ಕೆ ಬೆಲೆ ಕೊಡುವಿರಿ ತಾನೆ?” ಎಂದು ಗುಂಡುಮಬ್ಬೆ ಸಂದೇಹ ವ್ಯಕ್ತಪಡಿಸಿದಳು.

“ನನ್ನಲ್ಲೂ ನಿನಗೆ ಅನುಮಾನವೇ ಗುಂಡು! ನಿನ್ನ ಸುಖಕ್ಕಾಗೇ ಅಲ್ಲವೇ ನಾವು ಒದ್ದಾಡುತ್ತಿರುವುದು. ನಿನಗೊಪ್ಪಿಗೆಯಾದ ಗಂಡನನ್ನಾರಿಸಿಕೋ.”

“ಅಮ್ಮ, ನಾನೂ ಅಕ್ಕ ಅವಳಿಜವಳಿ ಮಕ್ಕಳು ! ಒಟ್ಟಾಗೆ ಹುಟ್ಟಿದೆವು. ಒಟ್ಟಾಗೇ ಬಾಳಬಾರದೇ? ”

“ನೀನು ಹೇಳುತ್ತಿರುವುದು ನನಗೆ ಅರ್ಥವೇ ಆಗುತ್ತಿಲ್ಲ ಗುಂಡು. ಎಷ್ಟುದಿನ ನೀವಿಬ್ಬರೂ ಒಟ್ಟಿಗಿರಲಾದೀತು? ಪಾಲಿಗೆ ಸಿಕ್ಕಿದ್ದು ಪರಮಾನ್ನ ಎಂದುಕೊಂಡು ನೀವಿಬ್ಬರೂ ನಿಮ್ಮ ನಿಮ್ಮ ಗಂಡನ ಮನೆಯಲ್ಲಿ ಬಾಳಲೇ ಬೇಕಲ್ಲ” ಎಂದು ಅಬ್ಬಕಬ್ಬೆ ಹೆಮ್ಮಕ್ಕಳ ಬಾಳನ್ನು ಬಿಡಿಸಿ ಹೇಳಿದಳು.

“ಅಕ್ಕನನ್ನು ಯಾರಿಗೆ ಕೊಡುವಿರೋ ಅವರೇ ನನಗೂ ಗಂಡನಾಗಬಾರದೇ ಅಮ್ಮ?” ಗುಂಡುಮಬ್ಬೆ ಗಂಭೀರವಾಗಿ ನುಡಿದಳು.

“ಏನೇ ಗುಂಡು ಇಂಥ ಸಂದರ್ಭದಲ್ಲೂ ಕುಶಾಲೇ?” ಅಬ್ಬಕಬ್ಬೆ ಸಿಡಿಕಾದಳು.

“ಕುಶಾಲಲ್ಲಮ್ಮ. ಅಕ್ಕನನ್ನು ಬಿಟ್ಟು ನಾನು ಅರೆಚಣವೂ ಇರಲಾರೆ. ಅಕ್ಕನನ್ನೂ, ನನ್ನನ್ನೂ ಒಂದೇ ಹಸೆಯಲ್ಲಿ ಕೂರಿಸಿ ಒಬ್ಬನೇ ಗಂಡನಿಗೆ ಧಾರೆಯೆರೆದುಕೊಡಿ !”

“ಅಲ್ಲ ಗುಂಡು ನೀನೇನು ವಿನೋದಕ್ಕಾಡುತ್ತಿರುವೆಯೋ ನಿಜವೊ?”

“ಖಂಡಿತವಾಗು ವಿನೋದವಲ್ಲಮ್ಮ.”

“ಅಯ್ಯೋ ಬೆಪ್ಪೆ, ಸಾಕು ಸುಮ್ಮನಿರು. ನಿಮ್ಮನ್ನು ಹೆತ್ತು ಹೊತ್ತು ಸಾಕಿದ ನನಗೆ ನಿಮ್ಮನ್ನು ಬಿಟ್ಟಿರಲು ಮನಸ್ಸಾಗುವುದೇ ತಾಯಿ? ಆದರೂ ಅನಿವಾರ್ಯವಾಗಿ ಹೆಣ್ಣು ಮಕ್ಕಳನ್ನು ಗಂಡನಮನೆಗೆ ಕಳುಹಿಸಿ ಕೊಡಬೇಕಲ್ಲ. ಒಂದೆರಡುದಿನ ನಿನಗೂ ಅಕ್ಕನ ನೆನಪಾಗುವುದು. ಅನಂತರ ಗಂಡ ಮಕ್ಕಳು. ತಾನಾಗೇ ಎಲ್ಲ ಸರಿಹೋಗುವುದು.”

“ಅದೊಂದೂ ನನಗೆ ಬೇಕಿಲ್ಲಮ್ಮ. ಒಂಭತ್ತು ತಿಂಗಳು ನಾವಿಬ್ಬರೂ ನಿನ್ನ ಹೊಟ್ಟೆಯಲ್ಲಿ ಒಟ್ಟಾಗಿ ಬೆಳೆದೆವು. ವರ್ಷಾನುಗಟ್ಟಲೇ ನಾನು ಅಕ್ಕ ಜೋಡು ತೊಟ್ಟಿಲಲ್ಲಿ ಮಲಗಿ ಹಾಯಾಗಿದ್ದೆವು. ಈಗಲೂ ಅಕ್ಕನ ಗಂಡನೇ ನನಗೂ ಗಂಡ!” ಎಂದು ಪಟ್ಟುಹಿಡಿದಳು.

“ಗುಂಡು, ನೀನು ಚಣಕಾಲದ ಭಾವಾವೇಶಕ್ಕೆ ಸಿಕ್ಕಿ ಬಾಳೆಲ್ಲ ಬವಣೆ ಪಡಬೇಕಾಗುವುದು. ನೀನಂತು ತಿಳಿವಳಿಕೆಯಿಲ್ಲದೆ ಮಾತಾಡುತ್ತಿರುವೆ. ಹಿರಿಯರಾದ ನಾವು ಇಬ್ಬರನ್ನೂ ಒಬ್ಬರಿಗೇ ಕೊಟ್ಟೇವೆ? ಲೋಕ ಏನಂದೀತು?” ಎಂದು ಅಬ್ಬಕಬ್ಬೆ ಕಾತರಗೊಂಡಳು.

“ನನ್ನಿಷ್ಟವಮ್ಮ. ಲೋಕದ ಸುದ್ದಿ ನನಗೇಕೆ? ಹೆಣಗುವವಳು ನಾನಲ್ಲವೆ? ಅಕ್ಕನ ಗಂಡನೇ ನನಗೂ ಗಂಡನಾಗಬೇಕು” ಎಂದು ಚಂಡಿಹಿಡಿದಳು.

“ಈಗ ಪ್ರೀತಿಯ ಅಕ್ಕತಂಗಿಯರಾಗಿ ಇರುವಿರಿ? ನಾಳೆ ಸವತಿಯರಾಗಿ ಕಚ್ಚಾಡುವಿರಿ!” ಎಂದು ಅಬ್ಬಕಬ್ಬೆ ಅಬ್ಬರಿಸಿದಳು.

“ಅಕ್ಕನೊಡನೆ ಹೊಂದಿಕೊಂಡು ಹೋಗುವೆನು. ಕಚ್ಚಾಟಕ್ಕೆ ಕಾರಣವೆ ಇಲ್ಲವಲ್ಲ?”

“ಅಯ್ಯೋ ಹುಚ್ಚಿ ಸುಮ್ಮನಿರು. ಬಾಳನ್ನೂ ಜೋಡಿತೊಟ್ಟಿಳು. ಇದುವರಿವಿಗೂ ಸುಮ್ಮನಿದ್ದ ಅತ್ತಿಮಬ್ಬೆಗೆ ತಂಗಿಯ ಮೇಲೆ ನಿಜವಾಗು ವಾತ್ಸಲ್ಯ ಉಕ್ಕಿಬಂದಿತು.

“ಅಮ್ಮ, ಗುಂಡುಮಬ್ಬೆ ಹೇಳಿದಂತೆಯೇ ಆಗಲಿ. ಅವಳನ್ನೂ ನನ್ನೊಡನೆ ಕರೆದುಕೊಂಡು ಹೋಗುವೆನು. ಒಬ್ಬರಿಗೊಬ್ಬರು ಆಸರವಾಗಿ ಬಾಳುವೆವು.”

“ಅವಳೊಬ್ಬಳನ್ನೆ ಹುಚ್ಚಿ ಎಂದುಕೊಂಡಿದ್ದೆ. ಈಗ ನೀನೂ ಹುಚ್ಚಿಯೇ. ಹುಡುಗಾಟ ಬಿಟ್ಟು, ಬಂದಿರುವ ಎರಡು ಗಂಡುಗಳಲ್ಲಿ ನಿಮಗೆ ಹೇಗೆಬೇಕೋ ಹಂಚಿಕೊಳ್ಳಿ. ಅಷ್ಟೇ ಹೊರತು ಇಬ್ಬರನ್ನೂಒಬ್ಬನಿಗೆ ನಾವು ಕೊಡಲಾರೆವು. ತಿಳಿಯಿತೇ?” ಎಂದು ಅಬ್ಬಕಬ್ಬೆ ತೀರ್ಮಾನ ಹೇಳಿದಳು.

“ಹಾಗಿದ್ದರೆ ನಮಗೆ ಮದುವೆಯೇ ಬೇಡ” ಎಂದು ಅತ್ತಿಮಬ್ಬೆ ಮತ್ತು ಗುಂಡು ಮಬ್ಬೆಯರು ಒಟ್ಟಿಗೇ ನುಡಿದರು.

“ಹತ್ತು ವರ್ಷ ಕೋಳೇ ಹಾಕಿದರೆ ನಿಮಗೆ ಬುದ್ಧಿ ಬರುವುದು” ಎಂದು ಅಬ್ಬಕಬ್ಬೆ ಸಿಡುಕಾದಳು.

“ಎಷ್ಟು ವರ್ಷವಾದರೂ ಹಾಕು. ಮದುವೆ ಮಾಡುವುದಾದರೆ ಇಬ್ಬರಿಗೂ ಒಬ್ಬನೇ ಗಂಡನಾಗಲಿ. ಇಲ್ಲದಿದ್ದರೆ ಮನೆಯಲ್ಲೇ ಇರುವೆವು” ಎಂದು ಇಬ್ಬರೂ ಕೊನೇ ತೀರ್ಮಾನ ಹೇಳಿಬಿಟ್ಟರು. ಅಬ್ಬಕಬ್ಬೆಗೆ ದಿಕ್ಕೇ ತೋಚದಂತಾಯಿತು.

“ಇದೇ ನಿಮ್ಮ ಕೊನೆಯ ಮಾತೇ?”

“ಅಹುದು ಕೊನೇಮಾತು! ” ಎಂದು ಇಬ್ಬರೂ ಒತ್ತಿನುಡಿದರು. ಅಬ್ಬಕಬ್ಬೆ ಚಣಕಾಲ ಚಿಂತಾಕ್ರಾಂತಳಾದಳು.

“ಹೂ, ನೀವಿನ್ನು ಹೊರಡಿ” ಎಂದು ಮಕ್ಕಳಿಗೆ ತಿಳಿಸಿದಳು. ಅವರಿಬ್ಬರೂ ಮುಖ ಗಂಟುಹಾಕಿಕೊಂಡು ಹೊರಟುಹೋದರು.

ಈ ಸುದ್ದಿಯನ್ನು ಕೇಳಿದಾಗ ಮಲ್ಲಪನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಈ ಸಮಸ್ಯೆಯನ್ನು ಬಿಡಿಸಲಾರದೆ ಒಳಗೊಳಗೇ ಕುದಿದನು. ರಾತ್ರಿಯೆಲ್ಲ ಅವನಿಗೂ ಅಬ್ಬಕಬ್ಬೆಗೂ ಜಾಗರಣೆಯಾಯಿತು. ಬೆಳಗಿನ ಜಾವ ತುಸುನಿದ್ರೆ ಹತ್ತಿತು.

“ಮಲ್ಲ, ಅತ್ತಿಮಬ್ಬೆ, ಗುಂಡುಮಬ್ಬೆಯರು ಒಂದೇ ನಾಣ್ಯದ ಎರಡು ಮುಖಗಳು. ಅವರಿಚ್ಛೆ ನೆರವೇರಲಿ. ಇದರಿಂದ ಕೆಡಕೇನೂ ಇಲ್ಲ. ಇಬ್ಬರನ್ನೂ ಒಬ್ಬನಿಗೇ ಕೊಟ್ಟು ಧಾರೆಯೆರೆದು ಬಿಡು”

ಎಂದು ನಾಗಮಯ್ಯ ತಿಳಿಸಿದಾಗ ಮಲ್ಲಪನಿಗೆ ಗಾಬರಿಯಾಗಿ ಎಚ್ಚರವಾಯಿತು. ಆಗಲೇ ಸೂರ್ಯೋದಯವಾಗಿ ಒಂದೆರಡು ಘಳಿಗೆ ಕಳೆದಿತ್ತು. ಮಲ್ಲಪ ಎದ್ದವನೇ ಮುಖ ತೊಳೆದುಕೊಂಡು ಪಂಪಕವಿಯನ್ನು ಕಂಡು ತನ್ನ ಹೆಮ್ಮಕ್ಕಳ ಹಟಮಾರಿತನವನ್ನು ನೆನ್ನೆ ರಾತ್ರಿ ಕಂಡ ಕನಸನ್ನೂ ವಿವರಿಸಿದನು. ಪಂಪಕವಿಯ ರಸಸಂಪುಟ ಪಕ್ಕನೇ ಅರಳಿತು! ಭಾವಾವೇಶ ಉಂಟಾಯಿತು ! ಇಂಥ ಅಕ್ಕತಂಗಿಯರನ್ನು ಕಂಡುದು ಈ ಜನ್ಮದಲ್ಲಿ ಈಗಲೇ. ಮಲ್ಲಪ, ದೈವೇಚ್ಛೆಗೆ ತಲೆಬಾಗಿಬಿಡು."

"ಮಲ್ಲಪ, ಎಲ್ಲ ನಾವು ಎಣಿಸಿದಂತೆ ಆಗಿದ್ದರೆ ಆ ಮಾತೇ ಬೇರೆ. ಎಷ್ಟೋ ಸಂದರ್ಭದಲ್ಲಿ ವಿಧಿಯ ಕುಣಿತಕ್ಕೆ ನಾವು ತಾಳ ಹಾಕಬೇಕಾಗಿದೆ."

"ಮುಂದಿನ ದಾರಿ?"

"ಅದನ್ನು ನನಗೆ ಬಿಟ್ಟುಬಿಡು. ಇಂದು ಊಟವಾದ ನಂತರ ಅದಕ್ಕೆ ಪರಿಹಾರ ಹುಡುಕುವೆನು. ಬಂದಿರುವರಲ್ಲಿ ಯಾರೊಬ್ಬರಿಗೂ ಸದ್ಯಕ್ಕೆ ಸುಳಿವು ಕೊಡಬೇಡ."

"ಅಥವ ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರಿಗೇ ವಹಿಸಿದರೆ. . . ."

"ಅದು ಸರಿ ಹೋಗುವುದಿಲ್ಲ. ನಾವಾಗೇ ಪಿಡುಗನ್ನು ಆಹ್ವಾನಿಸಿದಂತಾಗುವುದು. ಇದಕ್ಕೆ ವಕ್ರಮಾರ್ಗವೇ ಸರಿ. ಮಾತು ಏನೂ ಬರಬಾರದು. ದಲ್ಲಪ ಮತ್ತು ಚಾಮುಂಡರಾಯ ಇಬ್ಬರೂ ಒಪ್ಪುವಂಥ ಯೋಜನೆ ಹಾಕುವೆನು. ನೀನು ಹಾಯಾಗಿರು," ಎಂದು ಪಂಪಕವಿ, ಮಲ್ಲಪನನ್ನು ಸಮಾಧಾನ ಮಾಡಿದನು.

ಇಂದೂ ಔತಣ ನಡೆಯಿತು. ಸಂಭ್ರಮದಿಂದಲೂ ಸಡಗರದಿಂದಲೂ ಬಿಡಿಸಿದರು. ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ಅವಳಿ ಜವಳಿಗಳು. ಒಬ್ಬರಿದ್ದಂತೆ ಇನ್ನೊಬ್ಬರು. ಇವರಲ್ಲಿ ಅತ್ತಿಮಬ್ಬೆ ಯಾರು, ಗುಂಡುಮಬ್ಬೆ ಯಾರು ಪತ್ತೆ ಹಚ್ಚುವುದೇ ಕಷ್ಟವಾಗಿತ್ತು. ಇಂಥ ಜೋಡಿಯನ್ನು ಅಗಲಿಸಬಹುದೇ ಎಂದು ಚಾಮುಂಡರಾಯ ಚಿಂತೆಗೊಳಗಾದನು. ಒಬ್ಬರಿಗೇ ಕೊಟ್ಟರೆ ಮೇಲಲ್ಲವೇ ಎಂಬ ಯೋಚನೆಯೂ ಆತನಲ್ಲಿ ಸುಳಿಯದಿರಲಿಲ್ಲ. ಈ ಯೋಚನೆಯಲ್ಲೇ ಉಂಡು ಚಾಮುಂಡರಾಯ ವಿಶ್ರಮಿಸಿಕೊಂಡನು.

ಮಲ್ಲಪನ ಮನೆಯ ಸಭಾಭವನದಲ್ಲಿ ಮತ್ತೆ ಎಲ್ಲರೂ ಕಲೆತರು. ದಲ್ಲಪ ಮತ್ತು ಚಾಮುಂಡರಾಯರಿಗೆ ಕಾತರವೇರಿತ್ತು.

"ಮಲ್ಲಪ, ಇನ್ನೂ ಎಷ್ಟು ದಿನ ನಮಗೆ ಔತಣ ಮಾಡಿಸಬೇಕೆಂದಿರುವೆ?" ಎಂದು ದಲ್ಲಪ ಮುಗುಳ್ನಗುತ್ತಾ ಕೇಳಿದನು.

"ತಾವು ಇರುವಷ್ಟು ದಿನವೂ ಔತಣ ತಪ್ಪದು," ಪಂಪ ಭರವಸೆಯಿಂದ ನುಡಿದನು.

"ಇಂಥ ಔತಣ ಇರುವುದಾದರೆ ಬಂದವರಿಗೆ ಹೋಗುವುದಕ್ಕೆಲ್ಲಿ ಮನಸ್ಸಾದೀತು. !" ಚಾಮುಂಡರಾಯ ನಗೆಯಾಡಿದನು.

"ಅರಸರವೇನು ಕೆಲವುದಿನ ಹಾಯಾಗಿದ್ದುಬಿಡಿ."

"ನನಗಂತು ಕೆಲವು ವರ್ಷಗಳಿಂದ ವಿಶ್ರಾಂತಿಯೇ ದೊರೆತಿರಲಿಲ್ಲ. ರಣರಂಗದ ಜೀವನ. ಅವಸರ ಅವಾಂತರ ಇದೇ ನನ್ನ ಬಾಳೆಲ್ಲ. ಇಲ್ಲಿಗೆ ಬಂದಮೇಲೆ ಎಲ್ಲ ಯೋಚನೆಗಳನ್ನು ಬದಿಗಿಟ್ಟು ಪೂರ್ಣ ವಿಶ್ರಾಂತಿ ಪಡೆದನು," ಎಂದು ಚಾಮುಂಡರಾಯ ಸಂತೃಪ್ತನಾಗಿ ನುಡಿದನು.

"ಮಲ್ಲಪ, ಮುಖ್ಯ ವಿಷಯಕ್ಕೆ ಬರೋಣ. ಲಗ್ನ ಯಾವಾಗಿಟ್ಟುಕೊಳ್ಳಬೇಕು? ಎಲ್ಲಿಟ್ಟುಕೊಳ್ಳುವುದು?" ಎಂದು ದಲ್ಲಪ ಕಾತರಗೊಂಡು ಕೇಳಿದನು.

"ನಾನು ಊರಿಗೆ ಹೊರಟುಬಿಡಬೇಕು. ನಮ್ಮ ತಾಯಿಗೆ ಏನು ಹೇಳಲಿ ?" ಚಾಮುಂಡರಾಯ ಅವಸರಪಟ್ಟನು. ಮಲ್ಲಪ ಚಕಿತವಾಗಿ ಪಂಪ ಕವಿಯ ಮುಖವನ್ನು ನೋಡಿದನು.

"ರಾಯರೆ, ಈಗ ಒಂದು ಸಮಸ್ಯೆ ಉಂಟಾಗಿದೆ. . ."

"ಮಲ್ಲಪ ಏನಿದ್ದರೂ ನಿಸ್ಸಂಕೋಚವಾಗಿ ತಿಳಿಸಿಬಿಡಿ. ಅನುವು ಆಪತ್ತು ಮನುಷ್ಯರಿಗೆ ಇದ್ದೇ ಇರುವುದು. ಮನೆಯಲ್ಲಿ ಏನಾದರೂ ಮುಚ್ಚಟ್ಟು ಇದೆಯೆ?" ಚಾಮುಂಡರಾಯ ಬೆಸಗೊಂಡನು.

"ಅಂಥದೇನಿಲ್ಲ. ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ಅವಳಿವಳಿಗಳು. ಅನ್ಯೋನ್ಯವಾಗಿ ಬೆಳೆದಿರುವರು. ಈಗ ಒಬ್ಬರಿಗೊಬ್ಬರು ಅಗಲಲು ಇಷ್ಟಪಡುತ್ತಿಲ್ಲ" ಎಂದು ಪಂಪ ಸೂಚ್ಯವಾಗಿ ನುಡಿದನು.

“ಅವರನ್ನು ನೋಡಿದರೆ ನನಗೂ ಮರುಕವಾಗುವುದು. ಜೋಡಿ ಮಾವಿನಹಣ್ಣುಗಳಂತೆ ಇರುವ ಈ ಕನ್ನೆಯರನ್ನು ದಿಕ್ಕಿಗೊಂದರಂತೆ ದೂಡಬಹುದೇ ಎಂದು ನನಗೂ ಸಂಕಟವಾಗುವುದು. ಆದರೂ ಎಷ್ಟು ದಿನ ಜೊತೆಯಲ್ಲೇ ಇರುವುದಕ್ಕಾಗುವುದು? ಬೇಕಿದ್ದರೆ ಕೆಲವು ದಿನ ಇಬ್ಬರೂ ಒಟ್ಟಾಗಿ ಅಲ್ಲೋ ಇಲ್ಲೋ ಇರಬಹುದಲ್ಲ. ಹೆಣ್ಣು ಹೆತ್ತವರಿಗೆಲ್ಲ ಈ ಅಗಲಿಕೆ ಅನಿವಾರ್ಯ ತಾನೇ ?” ಎಂದು ಚಾಮುಂಡರಾಯ ಲೋಕಾಭಿರಾಮವಾಗಿ ನುಡಿದನು.

“ನಮ್ಮ ಸಮಸ್ಯೆ ಅದಲ್ಲ ರಾಯರೆ, ಮದುವೆ ಮಾಡುವುದಾದರೆ ನಮ್ಮಿಬ್ಬರನ್ನು ಒಬ್ಬರಿಗೇ ಮದುವೇ ಮಾಡಿಬಿಡಿ. ಒಂದೇ ಕಡೆ ಬಾಳುವೆವು ಎಂಬುದಾಗಿ ಹೆಣ್ಣುಮಕ್ಕಳು ಹಟಮಡುತ್ತಿರುವರು” ಎಂದು ಪಂಪ ನುಡಿದಾಕ್ಷಣ ಚಾಮುಂಡರಾಯ ಚಕಿತನಾದನು. ದಲ್ಲಪ ಗಾಬರಿಗೊಂಡನು. ಚಣಕಾಲ ಮೌನವಾವರಿಸಿತು.

“ಊಟಮಾಡುವಾಗ ನನಗೂ ಆ ಆಲೋಚನೆ ಬಾರದಿರಲಿಲ್ಲ. ಈ ಜೋಡಿಯನ್ನು ಕೊನೆತನಕ ಜೋಡಿಯಾಗೇ ಉಳಿಸಿಕೊಂಡರಾಗದೇ ? ಈ ಯಮಳ ತಾರೆಯರನ್ನು ಒಂದೇ ಹಸೆಯಲ್ಲಿ ಕೂರಿಸಿ ಧಾರೆಯೆರೆಯಬಾರದೇ? ಎಂಬ ಭಾವ ನನ್ನಲ್ಲೂ ಕಾಣಿಸಿಕೊಂಡಿತು. ಅದಕ್ಕೆ ಸರಿಯಾಗಿ ಈ ಮಕ್ಕಳೂ ಅದೇ ಯೋಚನೆ ಮಾಡಿರುವರಲ್ಲ. ಒಂದೇ ವೀಣೆಯ ಜೋಡು ತಂತಿಗಳಂತಿರುವ ಈ ಕನ್ನೆಯರನು ಕಂಡವರು ಏನಾದರೂ ಮಾಡಿ ಮನೆದುಂಬಿಸಿಕೊಳ್ಳಬೇಕೆಂದು ತವಕಗೊಳ್ಳದಿರರು !” ಎಂದು ಚಾಮುಂಡರಾಯ ಭಾವುಕನಾಗಿ ಬಿತ್ತರಿಸಿದನು.

“ನಾನು ರಾಯರಿಗಿಂತ ಮೊದಲೇ ಬಂದವನು!” ದಲ್ಲಪ ಸತ್‌ಸಂಪ್ರದಾಯದ ಪೀಠಿಕೆ ಹಾಕಿದನು.

“ಇಲ್ಲಿ ಹಿಂಚುಮುಂಚಿನ ಪ್ರಶ್ನೆ ಮುಖ್ಯವಲ್ಲ. ಕನ್ನೆಯರು ಯಾರನ್ನು ಒಪ್ಪುವರೋ ಅವರಿಗೆ ಕೊಡಲಿ” ಎಂದು ಚಾಮುಂಡರಾಯ ಗೆದ್ದವನಂತೆ ನುಡಿದನು.

“ನಮ್ಮ ಹೆಮ್ಮಕ್ಕಳು ಗಂಡನನ್ನೂ ಆರಿಸುವ ಭಾರವನ್ನು ನಮಗೇ ವಹಿಸಿಬಿಟ್ಟಿರುವರು. ‘ಬಂದಿರುವ ಎರಡು ಗಂಡುಗಳಲ್ಲಿ ಯಾರಿಗಾದರೂ ಕೊಡಿ. ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಇಬ್ಬರನ್ನೂ ಒಬ್ಬರಿಗೇ ಕೊಟ್ಟು ಮದುವೆ ಮಾಡಬಿಡಿ’ ಎಂದು ಅತ್ತಿಮಬ್ಬೆ ಮತ್ತು

ಗುಂಡುಮಬ್ಬೆಯರು ಮನಸಾರೆ ನುಡಿದಿರುವರು. ಈಗ ನಮಗೆ ದಲ್ಲಪನೂ ಬೇಕು. ಅಂತೆ ರಾಯರೂ ಬೇಕು. ತಾವಿಬ್ಬರೂ ನಮ್ಮ ಸಮಾಜದಲ್ಲಿ ಜಂಗಮ ಹಿಮಾಚಲಗಳು! ಈಗ ದೊಡ್ಡ ಮನಸ್ಸು ಮಾಡಿ ತಾವೇ ಮಾರ್ಗದರ್ಶನ ಮಾಡಬೇಕು" ಎಂದು ಪಂಪ ವಿನಂತಿಸಿಕೊಂಡನು. ದಲ್ಲಪ ಮತ್ತು ಚಾಮುಂಡರಾಯರಿಬ್ಬರೂ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡು ಬೆಪ್ಪಾದರು. ಇವರಿಬ್ಬರಿಗೂ ಈ ಯಮಳಕನ್ನೆಯರನ್ನು ಮನೆದುಂಬಿಸಿಕೊಳ್ಳುವಾಸೆ. ಬರಿಗೈಯಲ್ಲಿ ಹಿಂದಿರುಗಿದರೆ ಅವರ ಪ್ರತಿಷ್ಠೆಗೆ ಕುಂದು, ಅವರಿಬ್ಬರ ಬಾಳಿನಲ್ಲಿ ಇಂಥ ಜಟಿಲ ಸಮಸ್ಯೆ ಎಂದೂ ಉಂಟಾಗಿರಲ್ಲಿ. ಇಲ್ಲಿ ಪ್ರತಿಷ್ಠೆ ಪರಾಕ್ರಮಗಳಿಗೆ ಸ್ಥಳವೇ ಇಲ್ಲ ! ರಣರಂಗವಾಗಿದ್ದರೆ ಇಬ್ಬರೂ ಹಣಾಹಣೆಯಾಡಿಬಿಡುತ್ತಿದ್ದರು.

"ದಲ್ಲಪ ಮತ್ತು ಚಾಮುಂಡರಾಯರೆ, ತಮಗಿಬ್ಬರಿಗೂ ನಮಸ್ಕರಿಸಿ ಹೇಳುವೆನು. ನನ್ನಾಣೆ ನನ್ನ ಮನಸ್ಸಿನಲ್ಲಿ ಭೇದಭಾವ ಇಲ್ಲ. ಇಬ್ಬರಿಗೂ ಒಂದೊಂದು ಹೆಣ್ಣು ಕೊಟ್ಟು ಹಾಯಾಗಿರಬೇಕೆಂದು ನಾನು ಎಣಿಕೆ ಹಾಕಿದ್ದೆ. ಆದರೆ ನನ್ನ ಮಕ್ಕಳು ನನ್ನ ಆಶಾಗೋಪುರವನ್ನು ಒಂದೇ ಚಣದಲ್ಲಿ ಪುಡಿ ಮಾಡಿಬಿಟ್ಟರು ! ನನಗಂತು ತಾವಿಬ್ಬರೂ ಬೇಕು. ಅತ್ತಿಮಬ್ಬೆ ಮತ್ತು ಗುಂಡುಮಬ್ಬೆ ನನ್ನ ಮಕ್ಕಳಲ್ಲ, ಇಂದಿನಿಂದ ತಮ್ಮ ಮಕ್ಕಳು. ತಾವಿಬ್ಬರೂ ಒಂದಾಗಿ ಈ ಸಮಸ್ಯೆಯನ್ನು ಬಿಡಿಸಿ ನಗುನಗುತ್ತ ಹೋದರೆ ನಾನು ಬದುಕ್ಕಿದ್ದಕ್ಕೆ ಸಾರ್ಥಕ" ಎಂದು ಮಲ್ಲಪ ಅಳುಮೋರೆ ಹಾಕಿಕೊಂಡನು.

"ಮಲ್ಲಪ, ನೀನು ಕಣ್ಣೀರು ಹಾಕಬಾರದು. ಈ ಸಮಸ್ಯೆಗೆ ಪರಿಹಾರ ಹುಡುಕುವ ಭಾರವನ್ನು ಪಂಪ ಮಹಾಕವಿಗೆ ವಹಿಸಿಬಿಡೋಣ. ಈ ಯುಗದ ನಾಡೋಜ ಹೇಗೆ ಪರಿಹರಿಸಿದರೂ ನನಗೆ ಸಂತೋಷವೇ" ಎಂದು ಚಾಮುಂಡರಾಯ ಸಂಧಾನಕ್ಕೆ ಬಂದನು. ಅತ್ತ ದಲ್ಲಪ ಇದೇ ಸರಿಯೆಂದುಕೊಂಡನು. ಪಂಪಕವಿ ಕ್ಷಣಕಾಲ ಯೋಚನಾಮಗ್ನನಾಗಿ "ಎಲ್ಲರಿಗೂ ನನ್ನ ಮೇಲೆ ನಂಬಿಕೆಯಿದ್ದರೆ ನಾನು ಒಂದು ಮಾರ್ಗ ಸೂಚಿಸೇನು" ಎಂದು ಭರವಸೆಯಿತ್ತನು. ಎಲ್ಲರೂ ಇದರ ವಹಿವಾಟವನ್ನು ಪಂಪನಿಗೆ ಮನಸಾರೆ ವಹಿಸಿಕೊಟ್ಟರು. ದಲ್ಲಪನ ಮತ್ತು ಚಾಮುಂಡರಾಯನ ಹೆಸರುಗಳನ್ನು ಬೇರೆ ಬೇರೆ ಹತ್ತು ಚೀಟಿಗಳಲ್ಲಿ ಬರೆದು ಎಲ್ಲರಿಗೂ ನೋಡಿಸಿ ಒಂದೇ ಆಕಾರದಲ್ಲಿ

ಒಂದೇ ಅಳತೆಯಲ್ಲಿ ಮಡಿಚಿ ಒಂದು ಕರಂಡಕದಲ್ಲಿ ಪಂಪಕವಿ ಹಾಕಿ ಮುಚ್ಚಿದನು. ಅನಂತರ ಶಾಂತಿ ಜಿನೇಂದ್ರನ ದೇವಾಲಯದಲ್ಲಿ ಪೂಜೆ ಮಾಡಿಸಿದರು. ಕರಂಡಕವನ್ನು ದೇವರ ಮುಂದೆ ಇಟ್ಟು ಅದಕ್ಕೂ ಹೂ ಚೆಲ್ಲಿ ಸಿಂಗರಿಸಿದರು. ದಲ್ಲಪ ಮತ್ತು ಚಾಮುಂಡರಾಯ ಭಕ್ತಿಯಿಂದ ಪ್ರಾರ್ಥಿಸಿದರು. ಪಂಪಕವಿ ಮೂರವರ್ಷದ ಮಗುವನ್ನು ಕರೆದು ಒಂದು ಚೀಟಿ ಎತ್ತುವಂತೆ ಹೇಳಿದನು. ಮಗು ಒಂದು ಚೀಟಿಯನ್ನು ಎತ್ತಿ ಪುರೋಹಿತರ ಕೈಗೆ ಕೊಟ್ಟಿತು. ಪುರೋಹಿತರು ಅದನ್ನು ಬಿಚ್ಚಿ ಎಲ್ಲರಿಗೂ ನೋಡಿಸಿದರು. ದಲ್ಲಪನ ಹೆಸರಿರುವ ಚೀಟಿ ದೈವಾನುಗ್ರಹದಿಂದ ಗೆಲುವನ್ನು ಪಡೆಯಿತು!

"ಪಂಪದೇವ, ಅದೃಷ್ಟ ಪರೀಕ್ಷೆಯಲ್ಲಿ ಸೋತು ಹೋದೆನು!" ಎಂದು ಚಾಮುಂಡರಾಯ ಖಿನ್ನನಾದನು.

"ರಾಯರೆ, ಆದುದಾಯಿತು. ತಮಗೆ ನೋಯುವುದಾದರೆ ಈ ಹೆಣ್ಣುಗಳು ನನಗೆ ಬೇಡವೇ ಬೇಡ. ಅಷ್ಟೇ ಅಲ್ಲ ನಾನೇ ಸಂತೋಷವಾಗಿ ಈ ಮಕ್ಕಳನ್ನು ತಮ್ಮ ಮಡಿಲಲ್ಲಿ ಹಾಕುವೆನು. ಎಲ್ಲಾದರೂ ಇರಲಿ ಇವು ಸುಖವಾಗಿರಲಿ" ಎಂದು ದಲ್ಲಪ ಮನಸಾರೆ ನುಡಿದನು. ಚಾಮುಂಡರಾಯನ ಕಿನಿಸು ಮಾಯವಾಯಿತು.

"ದಲ್ಲಪ. ದೈವೇಚ್ಛೆಗೆ ತಲೆಬಾಗಿರುವೆನು. ನಾಡೋಜನ ಮುಂದೆ ನಾನು ತಪ್ಪಾಡೇನೆ? ನಾಗಮಯ್ಯನ ಮೊಮ್ಮಕ್ಕಳು ನನಗೂ ಮೊಮ್ಮಕಳೆ! ತಾವೇ ಮನೆದುಂಬಿಸಿ ಕೊಳ್ಳಿ" ಎಂದು ಚಾಮುಂಡರಾಯ ಸಂತೋಷವಾಗಿ ನುಡಿದನು.